# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 128 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 01–12–2023 ಶುಕ್ರವಾರ | ಪುಟ: 4 | ಬೆಲೆ : ರೂ.2–00
Volume - 01 Issue - 128 | Title- Code: KARKAN 28269 | Chitradurga | Date: 01-12-2023 Friday | Page: 4 | Price: Rs. 2-00



ಒಳಪುಟದ ಸುದ್ದಿಗಳು
ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ 2
ದೇವರ ಎತ್ತುಗಳಿಗೆ ಮೇವು ಪೂರೈಸ ಜಿಲ್ಲಾಡಳಿತದ ವಿರುದ್ಧ ಸ್ವಾಮೀಜಿ ಆಕ್ರೋಶ 3
ಫುಟ್ ತಂತ್ರಾಂಶದಲ್ಲಿ ಅಕ್ರಮ ಬೆಳೆ ತಿದ್ದುಪಡಿ ಮಾಡುವವರ ವಿರುದ್ಧ ಕ್ರಮ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಜಿ.ಪಂ ಕಚೇರಿಯಲ್ಲಿ ಕನಕ ಜಯಂತಿ ಆಚರಣೆ



» ಚಿತ್ರದುರ್ಗ

ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಗುರುವಾರ ಸಂತಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಆಚರಿಸಲಾಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಕನಕದಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ತಿಮ್ಮಪ್ಪ, ಯೋಜನಾ ನಿರ್ದೇಶಕ ಡಾ.ರಂಗಸ್ವಾಮಿ, ಮುಖ್ಯ ಯೋಜನಾಧಿಕಾರಿ ಸತೀಶ್ ರೆಡ್ಡಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಕಾಂತರಾಜ್ ಸೇರಿದಂತೆ ಜಿಲ್ಲಾ ಪಂಚಾಯಿತಿ ಸಿಬ್ಬಂದಿ ಇದ್ದರು.

### ಡಿ.01 ರಂದು ಏಡ್ಸ್ ದಿನ

» ಚಿತ್ರದುರ್ಗ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆ ಘಟಕ, ಜ್ಞಾನಗಂಗೋತ್ರಿ, ಸ್ನಾತಕೋತ್ತರ ಕೇಂದ್ರ ದಾವಣಗೆರೆ ವಿಶ್ವವಿದ್ಯಾಲಯ, ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಡಿ.01 ರಂದು ಬೆಳಿಗ್ಗೆ 10:30ಕ್ಕೆ ನಗರದ ಜ್ಞಾನಗಂಗೋತ್ರಿ ಸ್ನಾತಕೋತ್ತರ ಕೇಂದ್ರದಲ್ಲಿ ವಿಶ್ವ ಏಡ್ಸ್ ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ದಿವ್ಯಪ್ರಭು ಜಿಆರ್‌ಜೆ ಕಾರ್ಯಕ್ರಮ ಉದ್ಘಾಟಿಸುವರು. ಜಿ.ಪಂ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಎಸ್. ಜೆ ಸೋಮಶೇಖರ್ ಏಡ್ಸ್ ನಿಯಂತ್ರಣದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದವರಿಗೆ ಸನ್ಮಾನ ನೆರವೇರಿಸಲಿದ್ದಾರೆ. ದಾವಣಗೆರೆ ವಿಶ್ವವಿದ್ಯಾನಿಲಯದ ಉಪ ಕುಲಪತಿ ಬಿ.ಡಿ ಕುಂಬಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಿ.ಪಿ. ರೇಣುಪ್ರಸಾದ್. ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿ ಡಾ.ಸಿ.ಜೆ ಸುಧಾ ಪ್ರಸ್ತಾವಿಕವಾಗಿ ಮಾತನಾಡುವರು.ದಾವಣಗೆರೆ ವಿಶ್ವವಿದ್ಯಾನಿಲಯ ಕುಲ ಸಚಿವ (ಆಡಳಿತ) ಬಿ.ಬಿ ಸರೋಜ, ದಾವಣಗೆರೆ ವಿಶ್ವವಿದ್ಯಾನಿಲಯ ಕುಲ ಸಚಿವ(ಮೌಲ್ಯಮಾಪನ) ಡಾ.ಸಿ.ಕೆ. ರಮೇಶ, ದಾವಣಗೆರೆ ವಿಶ್ವವಿದ್ಯಾನಿಲಯ ಹಣಕಾಸು ಅಧಿಕಾರಿ ಡಾ.ಆರ್. ಶಶಿಧರ್, ಜ್ಞಾನಗಂಗೋತ್ರಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಎಂ.ವಿ ಲೋಕೇಶ್, ಚಿತ್ರದುರ್ಗ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ಬಿ.ವೈ ಯುವರಾಜ್, ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಎಸ್.ಪಿ ರವೀಂದ್ರ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ.ಡಿ. ಶಶಿಧರ, ತಾಲ್ಲೂಕು ವೈದ್ಯಾಧಿಕಾರಿ ಡಾ.ಬಿ.ವಿ ಗಿರೀಶ್, ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಡಿ.ಗೀತಾಂಜಲಿ, ಎಆರ್‌ಟಿ ಕೇಂದ್ರದ ವೈದ್ಯಾಧಿಕಾರಿ ಡಾ.ರೂಪಶ್ರೀ ಉಪಸ್ಥಿತಿರುವರು ಎಂದು ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದೆ.

### ಮೇವು ಸಾಗಣಿಕೆ ನಿರ್ಬಂಧ

» ಚಿತ್ರದುರ್ಗ

ಜಿಲ್ಲೆಯಲ್ಲಿ ಲಭ್ಯವಿರುವ ಮೇವುವನ್ನು ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳಿಗೆ ಸಾಗಾಣಿಕೆ ಮಾಡದಂತೆ ನಿರ್ಬಂಧಿಸಿ ಜಿಲ್ಲಾಧಿಕಾರಿ ದಿವ್ಯಪ್ರಭು. ಜೆ.ಆರ್.ಜೆ ಆದೇಶ ಹೊರಡಿಸಿದ್ದಾರೆ. ಬರಗಾಲದ ಹಿನ್ನಲೆಯಲ್ಲಿ ಮುಂಬರುವ ದಿನಗಳಲ್ಲಿ ಜಿಲ್ಲೆಯ ಜಾನುವಾರುಗಳಿಗೆ ಮೇವಿನ ಕೊರತೆಯಾಗುವ ಸಂಭವ ಇರುತ್ತದೆ. ಮುಂಜಾಗೃತ ಕ್ರಮವಾಗಿ ಜಿಲ್ಲೆಯಲ್ಲಿ ಹಾಲಿ ಲಭ್ಯವಿರುವ ಮೇವನ್ನು ರೈತರಿಗೆ ಒದಗಿಸಬೇಕಾಗಿರುವುದರಿಂದ ಸರ್ಕಾರದ ಆದೇಶದ ಅನುಸಾರ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

---

### 536ನೇ ಕನಕ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಟಿ.ರಘುಮೂರ್ತಿ ಹೇಳಿಕೆ

## ಕನಕದಾಸರು ಸಮಾನತೆಯ ರೂವಾರಿ


» ಚಳ್ಳಕೆರೆ

ಕಳೆದ ನೂರಾರು ವರ್ಷಗಳಿಂದ ಸಮಾಜದಲ್ಲಿ ಸುಖ ಶಾಂತಿ ನೆಲೆಸಲು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಕೀರ್ತನೆಗಳ ಮೂಲಕ ಪರಿವರ್ತನೆಯ ಪರ್ವವನ್ನು ಆರಂಭಿಸಿದ ಭಕ್ತ ಕನಕದಾಸರು ಲೋಕದ ಡೊಂಕನ್ನು ತಿದ್ದುವ ಮೂಲಕ ಸಮಾಜದ ಉನ್ನತಿಗೆ ಕಾರಣರಾದರು. ಇಂತಹ ಮಹಾನ್ ವ್ಯಕ್ತಿಯ ಆದರ್ಶಗಳು ಇಡೀ ಮಾನವ ಸಮುದಾಯಕ್ಕೆ ಸ್ಪೂರ್ತಿ ಎಂದು ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ನಗರದ ಕುರುಬರ ಹಾಸ್ಟೆಲ್‌ನಲ್ಲಿ ರೇವಣಸಿದ್ದೇಶ್ವರ ವಿದ್ಯಾವರ್ಧಕ ಸಂಘ ಹಾಗೂ ತಾಲ್ಲೂಕು ಕುರುಬ ಸಮುದಾಯ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 536ನೇ ಕನಕ ಜಯಂತಿ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕನಕದಾಸರು ಎಂದಿಗೂ ಸಹ ತಮ್ಮ ಮೌಲ್ಯವನ್ನು ಪ್ರತಿಪಾದಿಸದೆ ತಮ್ಮ ಚಿಂತನೆಗಳ ಬಗ್ಗೆ ಸಮಾಜವನ್ನು ತಿದ್ದುತ್ತಿದ್ದರು. ನೇರ ನುಡಿಯ ಮಹಾನ್ ಶಕ್ತಿಯಾಗಿದ್ದರು. ಅವರನ್ನು ಯಾರೇ ವಿರೋಧಿಸಲಿ ತಮ್ಮ ಉತ್ತಮ ಕಾರ್ಯದ ಮೂಲಕ ಅಂತಹವರಲ್ಲೂ ಪರಿವರ್ತನೆಯನ್ನು ತರುವಂತಹ ಶಕ್ತಿ ಹೊಂದಿದ್ದರು.ಭಕ್ತಕನಕದಾಸರಪರಮಶ್ರೇಷ್ಠ ಭಕ್ತರಾದ ಈ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಸಾಮಾಜಿಕ ಕಳಿಕಳಿ ಇರುವ ಮುಖ್ಯಮಂತ್ರಿ. ಎರಡು ಬಾರಿಗೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ತಮ್ಮನ್ನು ಟೀಕೆ ಮಾಡುವ ರಾಜಕೀಯ ಶಕ್ತಿಗಳಿಗೆ ಸಮರ್ಥವಾಗಿ ತಮ್ಮ ಕಾರ್ಯದ ಮೂಲಕ ಉತ್ತರ ನೀಡುತ್ತಾ ಬಂದಿದ್ದಾರೆ. ಪ್ರಸ್ತುತ ಕ್ಷೇತ್ರದ ಶಾಸಕನಾಗಿ ಮೂರನೇ ಬಾರಿಗೆ ಆಯ್ಕೆಯಾಗಿದ್ದು, ನನ್ನನ್ನು ಶಾಸಕನಾಗಿ ಆಯ್ಕೆ ಮಾಡುವಲ್ಲಿ ಈ ಸಮುದಾಯದ ಪಾತ್ರ ಸಾಕಷ್ಟಿದೆ.






> ನಮ್ಮೆಲ್ಲರ ಸಮ್ಮುಖದಲ್ಲಿ ಕನಕದಾಸರ ವೃತ್ತ ನಾಮಕರಣ ಮತ್ತು ಭೂಮಿ ಪೂಜೆ ಕಾರ್ಯ ನೆರವೇರಿಸಿದ್ದು ಮುಂದಿನ ದಿನಗಳಲ್ಲಿ ಸುಮಾರು ಒಂದು ಕೋಟಿ ವೆಚ್ಚದಲ್ಲಿ ಕನಕ ಸಮುದಾಯ ಭವನ ನಿರ್ಮಿಸುವುದಲ್ಲದೆ, ಗ್ರಾಮೀಣ ಪ್ರದೇಶದಲ್ಲೂ ಕನಕ ಭವನ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ.
>
> » **ಶಾಸಕ ಟಿ.ರಘುಮೂರ್ತಿ ಜನಪ್ರಿಯ ಶಾಸಕರು ಚಳ್ಳಕೆರೆ**

ಈ ಭಾಗದ ಸಮುದಾಯದ ಮುಖಂಡ ಆಶೋತ್ತರಗಳಿಗೆ ಸಕರಾತ್ಮಕವಾಗಿ ಸ್ಪಂದಿಸುವ ಅವಕಾಶ ದೊರಕಿದೆ. ಉಣ್ಣೆ ಕೈಮಗ್ಗ ಸಹಕಾರ ಸಂಘದ ಪುನಶ್ಚೇತನಕ್ಕೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಗತ್ಯ ಸೌಲಭ್ಯಗಳನ್ನು ನೀಡಲಾಗುವುದು. ಸಮುದಾಯದಮಹಿಳೆಯರಿಗೆಆಲ್ಯಬಾಯಿ ಹೆಸರಿನಲ್ಲಿ ಭವನ ನಿರ್ಮಿಸುವಂತೆ ಮನವಿ ಮಾಡಿದ್ದು ಈ ಬಗ್ಗೆ ಸೂಕ್ತ ನಿರ್ಮಾಣ ಕೈಗೊಳ್ಳಲಾಗುವುದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಂಶುಪಾಲ ಪ್ರೊ.ಎಂ.ಶಿವಲಿಂಗಪ್ಪ, ಹಾಲುಮತ ಸಮುದಾಯ ನುಡಿದಂತೆ ನಡೆಯುವ ಸಮುದಾಯ ನಮ್ಮೆಲ್ಲರಿಗೂ ಭಕ್ತಕನಕದಾಸರೇ ಆದರ್ಶ. ಅವರ ದಾಸಸಾಹಿತ್ಯದಲ್ಲಿ ಬುದುಕಿನ ಪರಿವರ್ತನೆಯ ಮಾರ್ಗ ಅಡಗಿದೆ ಎಂದರು.

ಉಪನ್ಯಾಸ ನೀಡಿದ ಪ್ರೊ. ಅರುಣಜೋಳದರಾಶಿ, ಭಕ್ತಕನಕ ದಾಸರ ಕೀರ್ತನೆಗಳು ಮಾನವರಲ್ಲಿ ಪರಿವರ್ತನೆಯ ತಂಗಾಳಿ ಬೀಸಲು ಆರಂಭಿಸಿದ ಕೂಡಲೇ ಬ್ರಾಹ್ಮಣಶಾಹಿ ಕೀರ್ತನಕಾರರು ಇವರ ಮೇಲೆ ಅಸಹನೆಯನ್ನು ವ್ಯಕ್ತಪಡಿಸಲು ಆರಂಭಿಸಿದರು. ಆದರೆ, ಕನಕದಾಸರು ಮಾತ್ರ ತಮ್ಮ ಛಲವನ್ನು ಬಿಡದೆ ಸಮಾಜದ ಒಳಿತಿಗಾಗಿ ಕೀರ್ತನೆಗಳನ್ನು ರಚಿಸಿ ಬದಲಾವಣೆಯ ಪರ್ವ ಸೃಷ್ಠಿಸಿದರು. ಇಂದಿಗೂ ಸಹ ದಾಸರ ಕೀರ್ತನೆ ನಮ್ಮಲ್ಲಿ ಅಘಾದವಾದ ಹೊಸ ಶಕ್ತಿಯನ್ನು ಉಂಟು ಮಾಡಿವೆ ಎಂದರು. ಕನಕದಾಸರನ್ನು ಉದ್ದೇಶಿಸಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಶಶಿಕಲಾಸುರೇಶ್‌ಬಾಬು, ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಜೆ.ರಾಘವೇಂದ್ರ ಮೊದಲಾದವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೇವಣಸಿದ್ದೇಶ್ವರ ವಿದ್ಯಾವರ್ಧಕ ಸಂಘ ಅಧ್ಯಕ್ಷ ಆರ್.ಮಲ್ಲೇಶಪ್ಪ, ಕುರುಬ ಸಮಾಜ ಸಂಘಟನೆಯಲ್ಲಿ ಇನ್ನೂ ಹೆಚ್ಚು ಪರಿವರ್ತನೆಯನ್ನು ಕಾಣುವ ಕಾಲ ಎದುರಾಗಿದೆ. ಇಂದು ನಾವು ಎರಡನೇ ಬಾರಿಗೆ ನಮ್ಮ ಸಮುದಾಯಕ್ಕೆ ಆದರ್ಶರಾದ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿಯನ್ನಾಗಿ ಪಡೆದಿದ್ದೇವೆ. ಸಂಘಟನೆಯಲ್ಲಿ ಯಾವುದೇ ಲೋಪ ಬಂದರೂ ಅದನ್ನು ಬದಿಗಿಟ್ಟು ಸಮಾಜದ ಬಲವರ್ಧನೆಗೆ ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಜಗದೀಶ್, ಬಿ.ಮಲ್ಲಿಕಾರ್ಜುನ್, ಕನಕನೌಕರರ ಸಂಘದ ಅಧ್ಯಕ್ಷ ಎಲ್.ರುದ್ರಮುನಿ, ಬಿಇಒ ಕೆ.ಎಸ್.ಸುರೇಶ್,ಕಂದಿಕೆರೆಸುರೇಶ್‌ಬಾಬು, ಡಿ.ಮಹಲಿಂಗಪ್ಪ, ಡಿ.ಜಯರಾಮ್, ಟಿ.ಮಲ್ಲೇಶಪ್ಪ, ಪರಸಪ್ಪ, ಪಾತಲಿಂಗಪ್ಪ, ನಗರಸಭಾ ಸದಸ್ಯರಾದ ಕೆ.ವೀರಭದ್ರಪ್ಪ, ರಮೇಶ್‌ಗೌಡ, ಮುಖಂಡರಾದ ಸದಾಶಿವಯ್ಯ, ಬಿ.ಎಸ್.ಅನ್ನಪೂರ್ಣ, ಆರ್.ಮೀನಾಕ್ಷಿ, ಎಂ.ಚನ್ನಪ್ಪ, ಚೌಳೂರು ಬಸವರಾಜು, ಗೀತಾಕುಮಾರಿ ಮುಂತಾದವರು ಉಪಸ್ಥಿತರಿದ್ದರು.

---

## ಹೋರಾಟಗಳ ಚರಿತ್ರೆ ಅರಿವು ಅಗತ್ಯ

» ದಾವಣಗೆರೆ

ಹೋರಾಟಗಳ ಚರಿತ್ರೆ, ಸಂಘಟನೆಯ ಸಿದ್ಧಾಂತ, ಅರಿವು, ವರ್ತಮಾನದ ಹೋರಾಟಗಳನ್ನು ನಡೆಸಲು ಕಾರ್ಯಕರ್ತರ ತರಬೇತಿ ಅತ್ಯವಶ್ಯಕ. ಸಾರಿಗೆ ನೌಕರರ ಫೆಡರೇಷನ್ ಕಾರ್ಯಕರ್ತರ ತರಬೇತಿ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಶನ್ ಆಶ್ರಯದಲ್ಲಿ ಬುಧವಾರ ಹರಿಹರದ ಶಿವಮೊಗ್ಗ ರಸ್ತೆಯಲ್ಲಿನ ಮೈತ್ರಿವನದ ಮಾನವ ಮಂಟಪದ ಪ್ರೊ.ಬಿ.ಕೃಷ್ಣಪ್ಪಭವನದಲ್ಲಿಆಯೋಜಿಸಲಾಗಿದ್ದ 2ದಿನಗಳ ರಾಜ್ಯಮಟ್ಟದ ಕಾರ್ಯಕರ್ತರ ಉದ್ಘಾಟಿಸಿ ಮಾತನಾಡಿದರು.

ಫೆಡರೇಷನ್ ಗೌರವಾಧ್ಯಕ್ಷ ಡಾ.ಸಿದ್ದನಗೌಡ ಪಾಟೀಲ್ ಮಾತನಾಡಿ, ಮಾನವ ಬಂಧುತ್ವ ವೇದಿಕೆಯು ರಾಜ್ಯದ ಕೇಂದ್ರ ಭಾಗದಲ್ಲಿ ಪ್ರೊ. ಬಿ.ಕೃಷ್ಣಪ್ಪ ಭವನದಲ್ಲಿ ರಾಜ್ಯದ ಎಲ್ಲಾ ಪ್ರಗತಿಪರ ಚಳುವಳಿಗಳಿಗೆ ನೆರವಾಗುತ್ತಿದೆ. ಸತೀಶ್ ಜಾರಕಿಹೊಳಿ ಅವರು ರಾಜ್ಯದಲ್ಲಿ ಕಳೆದ ಒಂದು ದಶಕದಿಂದ ವೈಚಾರಿಕ ಪ್ರಜ್ಞೆ ಮೂಡಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ರಾಜ್ಯದ ಎಲ್ಲಾ ಶಾಸಕರು, ಸಚಿವರು ಸತೀಶ್ ಜಾರಕಿಹೊಳಿ ಅವರಂತೆ ಸಂವೇದನಾ ಶೀಲರಾಗಿ, ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡರೆ ರಾಜ್ಯದಲ್ಲಿ ಪ್ರತಿಗಾಮಿ ಶಕ್ತಿಗಳನ್ನು, ಅವರ ಕುತಂತ್ರಗಳನ್ನು ಹಿಮ್ಮೆಟ್ಟಿಸಬಹುದೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕಾಂ.ವಿಜಯ ಭಾಸ್ಕರ್ ಶಿಬಿರಾರ್ಥಿಗಳು, ಅತಿಥಿಗಳನ್ನು ಸ್ವಾಗತಿಸಿದರು. ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ.ಎ.ಬಿ.ರಾಮಚಂದ್ರಪ್ಪ ಇತರರು ಇದ್ದರು.




---

**ಪ್ರಮುಖ ಸುದ್ದಿ**

### ಕನಕದಾಸರ ಚಿಂತನೆ ಇಂದಿಗೂ ಪ್ರಸ್ತುತ: ವಿಶ್ರಾಂತ ಕುಲಪತಿ ಸುನಂದಮ್ಮ

## ವಿಜೃಂಭಣೆಯ ಕನಕದಾಸ ಜಯಂತಿ ಆಚರಣೆ

» ಚಿತ್ರದುರ್ಗ

ಕನಕದಾಸರು ಮರಣಿಸಿ 5 ಶತಮಾನಗಳು ಕಳೆದಿವೆ. ಇಂದಿಗೂ ಅವರ ಚಿಂತನೆಗಳು ಪ್ರಸ್ತುತವಾಗಿವೆ. ಕನಕದಾಸರ ತತ್ವಗಳನ್ನು ಜೀವನ ಹಾಗೂ ಆಡಳಿತದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ದಾರ್ಶನಿಕರಾಗಿ ಕನಕದಾಸರು ಎಲ್ಲಾ ಕಾಲಕ್ಕೂ ಸಲ್ಲುವರು ಎಂದು ಅಕ್ಕಮಹಾದೇವಿ ವಿಶ್ವ ವಿದ್ಯಾಲಯದ ವಿಶ್ರಾಂತ ಕುಲಪತಿ ಸುನಂದಮ್ಮ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರ ಸಭೆ ಹಾಗೂ ಜಿಲ್ಲಾ ಕುರುಬ ಸಂಘದ ಸಹಯೋಗದಲ್ಲಿ, ನಗರ ತರಾಸು ರಂಗಮಂದಿರದಲ್ಲಿ ಗುರುವಾರ ಆಯೋಜಿಸಲಾದ ಸಂತಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ವಿಶೇಷ ಉಪನ್ಯಾಸ ನೀಡಿದರು.

ಕನಕದಾಸರು, ಬಡವರು ಹಾಗೂ ಜನಪರವಾಗಿ ಸಾಹಿತ್ಯ ರಚನೆ ಮಾಡಿದ್ದಾರೆ. ಜಾತಿ, ಬಣ್ಣ, ವರ್ಗಗಳ ನಡುವಿನ ತಾರತಮ್ಯವನ್ನು ಖಂಡಿಸಿದ್ದಾರೆ. ಅಭಿವೃದ್ಧಿ ಎಂದರೆ ದೊಡ್ಡ ಭವನಗಳ ನಿರ್ಮಾಣ ಮಾಡುವುದಲ್ಲ. ಅಧಿಕಾರ ಹಾಗೂ ಸಂಪತ್ತು ಸಿಕ್ಕಾಗ ಜನ ಸಾಮಾನ್ಯರಿಗೆ ವಿನಯೋಗಿಸಬೇಕು. ಹಸಿದವರಿಗೆ ಅನ್ನ ನೀಡಬೇಕು. ಕನಕದಾಸರು ರಚಿಸಿದ ಮೋಹನ ತರಂಗಿಣಿಯಲ್ಲಿ ಸುಭೀಕ್ಷ ರಾಷ್ಟದ ಚಿತ್ರಣ ನೀಡುತ್ತಾರೆ. ಇದು ಅಂದಿನ ವಿಜಯನಗರ ಸಾಮ್ರಾಜ್ಯದ ಬಣ್ಣನೆಯಾಗಿದೆ. ಜನಸಾಮಾನ್ಯರಿಗೆ ಅಗತ್ಯವಾದ ಅರವಟಿಗೆ, ಚಾವಡಿಗಳನ್ನು ರಾಜ್ಯದ ಎಲ್ಲಡೆ ಅಂದು ನಿರ್ಮಿಸಲಾಗಿತ್ತು. ಹಸಿದವರಿಗೆ ನಿತ್ಯ ಊಟ ನೀಡಲಾಗುತ್ತಿತ್ತು ಎಂದು ಕನಕದಾಸರು ಬರೆದಿದ್ದಾರೆ.




ಬೃಹತ್ ಸಮುದ್ರಕ್ಕಿಂತ ಜನರಿಗೆ ಕುಡಿಯಲು ನೀರು ನೀಡುವ ಕೆರೆ, ತೊರೆ, ನದಿ, ಹಳ್ಳಗಳು ಉತ್ತಮ ಎಂದು ಕನಕದಾಸರು ಸಾರಿದ್ದಾರೆ. ಸಂಪತ್ತು ಎಲ್ಲವನ್ನೂ ಕ್ರೂಢಿಕರಿಸಿಕೊಂಡು ಜನಸಾಮಾನ್ಯರಿಗೆ ವಿನಯೋಗಿಸದೆ ಇದ್ದರೆ ಅದು ಉಪ್ಪುನೀರಿನ ಸಮುದ್ರವಿದ್ದಂತೆ ಎಂದು ಹೋಲಿಕೆ ಮಾಡಿದ್ದಾರೆ.

ಕನಕದಾಸರು ನಡೆ ನುಡಿಗಳಲ್ಲಿ ಒಂದಾಗಿ ಬಾಳಿದರು. ಹರಿಹರ ತತ್ವನ್ನು ಒಟ್ಟುಗೂಡಿಸಿ ಸಾಹಿತ್ಯ ರಚನೆ ಮಾಡಿದ್ದಾರೆ. ಕುಲ, ಜಾತಿ, ಪಂಥಗಳನ್ನು ಮೀರಿ ಜನರು ಬಾಳುವಂತೆ ಬೋಧಿಸಿದ್ದಾರೆ. 'ಡೊಂಕು ಬಾಲದ ನಾಯಕರೇ' ಎನ್ನುವ ಕೀರ್ತನೆ ಮೂಲಕ ಜನ ನಾಯಕರು ಹಾದಿ ತಪ್ಪಿದರೆ ಜನರೇ ತಕ್ಕ ಪೆಟ್ಟು ನೀಡುವರು ಎಂಬುದನ್ನು ತಿಳಿಸಿದ್ದಾರೆ. ರಾಮಧಾನ್ಯ ಚರಿತೆಯ ಮೂಲಕ ಬಡಜನರ ಆಹಾರ ರಾಗಿಯ ಶ್ರೇಷ್ಠತೆಯನ್ನು ಸಾರಿದ್ದಾರೆ ಎಂದು ವಿಶ್ರಾಂತ ಕುಲಪತಿ ಸುನಂದಮ್ಮ ಹೇಳಿದರು.

ಜಯಂತಿ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ, ಕನಕದಾಸರು ಜನಮಾಸನದಲ್ಲಿ ಅಮರರಾಗಿದ್ದಾರೆ. ಬೇರೆ ದಾಸ ಶ್ರೇಷ್ಠರ ಕೀರ್ತನೆಗೂ ಕನಕದಾಸರ ಕೀರ್ತನೆಗಳಿಗೂ ವ್ಯತ್ಯಾಸವಿದೆ.

ಶೋಷಣೆಗೆ ಒಳಗಾದವರ ಧ್ವನಿಯಾಗಿ ಕನಕದಾಸರು ಸಾಹಿತ್ಯ ರಚನೆ ಮಾಡಿದ್ದಾರೆ. ಆರಂಭದಲ್ಲಿ ತಿಮ್ಮಪ್ಪನಾಗಿದ್ದವರು, ಸಿಕ್ಕ ಬಂಗಾರವನ್ನು ಹಂಚಿ ಕನಕನಾಯಕನಾದರು. ನಂತರ ಭಕ್ತಿ ಭಾವದಿಂದ ಕೃಷ್ಣನನ್ನೇ ಒಲಿಸಿಕೊಂಡು ದಾಸರಲ್ಲಿಯೇ ಶ್ರೇಷ್ಠರಾದ ಕನಕದಾಸರು ಎಂದು ಪ್ರಸಿದ್ಧರಾದರು. ಕುಲ ಕುಲ ಎಂದು ಹೊಡದಾಡದಿರಿ, ಕುಲದ ನೆಲೆಯನೇನಾದರೂ ಬಲ್ಲಿರಾ...? ಎಂದು ಪ್ರಶ್ನಿಸುವ ಮೂಲಕ ಜಾತಿ ಶ್ರೇಷ್ಠತೆಯನ್ನು ಅಲ್ಲಗಳೆದರು. ಕನಕದಾಸರ ಚಿಂತನೆ ವಿಶ್ವಕ್ಕೆ ದಾರಿ ದೀಪವಾಗಿದೆ. ಮುಂದಿನ ಪೀಳಿಗೆಗೆ ಕನಕದಾಸರ ಚಿಂತನೆಯನ್ನು ತಿಳಿಸುವ ಕೆಲಸವಾಗಬೇಕು ಎಂದರು.


ಪುಟ 2

## ಫಾಸ್ಟ್ ನ್ಯೂಸ್

### ಕನ್ನಡ ಶಾಲೆಗಳ ವಾಸ್ತವ ಸ್ಥಿತಿಯ ಬಗ್ಗೆ ಪರಿಶೀಲನೆ: ಮನವಿ ಅರ್ಪಣೆ



» **ಚಳ್ಳಕೆರೆ**

ನಗರದ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ಜೊತೆಗೆ ಸರ್ಕಾರದ ಎಲ್ಲಾ ಸೌಲಭ್ಯ ಹಾಗೂ ಶಾಲೆಗಳ ಕೊಠಡಿಗಳು ಸಹ ಗುಣಮಟ್ಟದಾಗಿರಬೇಕೆಂಬ ಸದುದ್ದೇಶದಿಂದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ರಾಜ್ಯಾದ್ಯಂತ ಕನ್ನಡ ಶಾಲೆಗಳ ವಾಸ್ತವ ಸ್ಥಿತಿ ಅನಾವಣವನ್ನು ಕಾರ್ಯವನ್ನು ಹಮ್ಮಿಕೊಂಡಿದೆ. ತಾಲ್ಲೂಕಿನ ನಗರಂಗೆರೆಮತ್ತುಗೋಪನಹಳ್ಳಿಗ್ರಾಮಗಳಶಾಲೆಗಳ ವಾಸ್ತವ ಸ್ಥಿತಿಯ ಬಗ್ಗೆ ಸಮಗ್ರ ವರದಿ ನೀಡಿದ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳ ಮೂಲಭೂತ ಸೌಲಭ್ಯ, ಕೊರತೆಗಳ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸಂಘಟನಾ ಕಾರ್ಯದರ್ಶಿ ನಗರಂಗೆರೆ ಸಿ.ಮಹೇಶ್ ತಿಳಿಸಿದರು. ಅವರು, ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಭೇಟಿ ನೀಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪರವಾಗಿ ಕಚೇರಿಯ ಪತ್ರಾಂಕಿತ ಅಧಿಕಾರಿಗೆ ಕನ್ನಡ ಶಾಲೆಗಳ ವಾಸ್ತವ ಸ್ಥಿತಿ ಕುರಿತು ಸಮಿತಿ ನಡೆಸಿದ ಅಧ್ಯಯನದ ವರದಿ ಹಾಗೂ ಸಂಪೂರ್ಣ ಮಾಹಿತಿಯನ್ನು ಲಿಖಿತ ಮೂಲಕವಾಗಿ ನೀಡಿದರು. ಮನವಿ ಸ್ವೀಕರಿಸಿ ಮಾತನಾಡಿದ ಅವರು, ತಮ್ಮ ಮನವಿಯನ್ನು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮುಂದಿನ ಕ್ರಮಕೈಗೊಳ್ಳುವ ಕುರಿತು ಆದೇಶಕ್ಕಾಗಿ ರವಾನಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಎಸ್.ಬಾಲರಾಜಯಾದವ್, ತಾಲ್ಲೂಕು ಮುಖಂಡ ಸಿ.ಬೋಜರಾಜ, ಜಬೀವುಲ್ಲಾ ಮುಂತಾದವರು ಉಪಸ್ಥಿತರಿದ್ದರು

### ಗ್ರಾಪಂ ಆಡಳಿತದೊಂದಿಗೆ ಸಹಕರಿಸಲು ಜನರಿಗೆ ವಿಶೇಷ ತರಬೇತಿ ಮೂಲಕ ಮನವಿ: ಅಧ್ಯಕ್ಷ ನಾಗರಾಜು




» **ಚಳ್ಳಕೆರೆ**

ತಾಲ್ಲೂಕಿನ ಸಾಣೀಕೆರೆ ಗ್ರಾಮ ಪಂಚಾಯಿತಿ ಕೇಂದ್ರದಲ್ಲಿ ಎರಡು ದಿನಗಳ ಕಾಲ ದೂರದೃಷ್ಟಿ ಮತ್ತು ಗುರಿ ತರಬೇತಿಯನ್ನು ಆಯೋಜಿಸಲಾಗಿದ್ದು, ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಗ್ರಾಮೀಣ ಭಾಗದ ಗ್ರಾಮ ಪಂಚಾಯಿತಿ ಮಟ್ಟದ ಸುಧಾರಣೆಗೆ ಇಂತಹ ದೂರದೃಷ್ಟಿ ಮತ್ತು ಗುರಿ ತರಬೇತಿ ಹೆಚ್ಚು ಉಪಯುಕ್ತವಾಗುತ್ತದೆ ಎಂದರು.

ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರಿಗೆ ನಾವು ಮೂಲಭೂತ ಸೌಕರ್ಯಗಳ ಜೊತೆಗೆ ಸರ್ಕಾರದಿಂದ ಬರುವ ವಿವಿಧ ಯೋಜನೆಗಳ ಸೌಲಭ್ಯಗಳನ್ನು ನೀಡಬೇಕಿದೆ. ಆದರೆ, ಕಾನೂನು ಪರಿಮಿತಿಯಲ್ಲೇ ನಾವು ಫಲಾನುಭವಿಗಳ ಆಯ್ಕೆ ಮಾಡಬೇಕಿದೆ. ಪ್ರತಿಯೊಂದು ಹಂತದಲ್ಲೂ ಸರ್ಕಾರದ ನಿಯಮವನ್ನು ಪಾಲಿಸಿದರೆ ಮಾತ್ರ ಯಾವುದೇ ಲೋಪವೆಸಗಲು ಸಾಧ್ಯವಿಲ್ಲ. ಉತ್ತಮ ಕಾರ್ಯಸಾಧನೆಗೆ ಗ್ರಾಮ ಪಂಚಾಯಿತಿ ಆಡಳಿತದೊಂದಿಗೆ ಸಾರ್ವಜನಿಕರೂ ಸಹ ಕೈಜೋಡಿಸಬೇಕು ಎಂದರು ಸಲಹೆ ನೀಡಿದರು.

ಅನೋಡ್ ಗವರ್ನೆನ್ಸ್ ಫೌಂಡೇಷನ್ ವ್ಯವಸ್ಥಾಪಕ ಲಿಂಗದೇವರು ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಸ್ಥೆ ವತಿಯಿಂದ ವಿವಿಧ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ಪಂಚಾಯಿತಿ ಆಡಳಿತ ಮತ್ತು ಜನರ ಮಧ್ಯೆ ವಿಶ್ವಾಸವನ್ನು ಹುಟ್ಟುಹಾಕಲಾಗಿದೆ. ಸರ್ಕಾರದ ನಿಯಮ ಮತ್ತು ಕಾನೂನುಗಳ ಪಾಲನೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದಾಗ ಯಾವುದೇ ರೀತಿಯ ಸಮಸ್ಯೆ ಎದುರಾಗುವುದಿಲ್ಲ. ಈಗಾಗಲೇ ಬಹುತೇಕ ತಾಲ್ಲೂಕು ಮಟ್ಟದ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ತರಬೇತಿ ಶಿಬಿರ ಮತ್ತು ಗುರಿ ಸಾಧನೆಯ ಬಗ್ಗೆ ಚುನಾಯಿತ ಸದಸ್ಯರಲ್ಲಿ ಜಾಗೃತಿ ಮೂಡಿಸಿದ್ದು ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆ ಮುಂದುವರೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷೆ ಶಶಿಕಲಾ, ಪಿಡಿಒ ದೇವರಾಜು, ಕಾರ್ಯದರ್ಶಿ ಶಿವಣ್ಣ, ಕ್ಷೇತ್ರ ಸಂಯೋಜಕ ಡಿ.ರವಿ, ಎಚ್.ಆರ್. ಮಧು, ಲಿಂಗರಾಜು, ಮಧುಸೂದನ್, ದೀಪಾ ಮುಂತಾದವರು ಉಪಸ್ಥಿತರಿದ್ದರು.

# ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ: ಶಾಸಕ ಗೋಪಾಲಕೃಷ್ಣ

» **ನಾಯಕನಹಟ್ಟಿ**

ಮೊಳಕಾಲ್ಮೂರು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವುದಕ್ಕೆ ಎಲ್ಲಾ ಪಕ್ಷದವರು ಸಾಥ್ ಕೊಟ್ಟರೆ ಮಾತ್ರ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ ಎಂದು ಮೊಳಕಾಲ್ಮೂರು ಶಾಸಕ ಎನ್.ವೈ.ಗೋಪಾಲಕೃಷ್ಣ ಹೇಳಿದರು.

ನಾಯಕನಹಟ್ಟಿ ಸಮೀಪದ ತಳಕು ಗ್ರಾಮದಲ್ಲಿ 2.45 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಪೊಲೀಸ್ ಠಾಣೆ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕೂಡ್ಲಿಗಿ ಶಾಸಕ ಆದ ಸಂದರ್ಭಲ್ಲಿ ಎಲ್ಲಾ ಪಕ್ಷದವರು ಸಾಥ್ ಕೊಟ್ಟರು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಯಿತು ಎಂದರು. ಈ ಹಿಂದೆ ಇದ್ದಂತಹ ಶಾಸಕರುಗಳು 10 ವರ್ಷ ಅವಧಿಯಲ್ಲಿ ಈ ಕ್ಷೇತ್ರ ಅಭಿವೃದ್ಧಿಯಾಗದೆ ಹಿಂದುಳಿದಿರುವ ಮೊಳಕಾಲ್ಮೂರು ಕ್ಷೇತ್ರವನ್ನು ನನ್ನ 5 ವರ್ಷದ ಅವಧಿಯಲ್ಲಿ ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿದ್ದೇನೆ. ಸಾಮಾಜಿಕ ಜಾಲತಾಣದಲ್ಲಿ ನನ್ನ ಬಗ್ಗೆ ಇಲ್ಲಸಲ್ಲದ ಹೇಳಿಕೆ ಕೊಡುವುದು ಸರಿಯಲ್ಲ,



ಬಿಜೆಪಿ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ಆಧಾರ ರಹಿತ ಆರೋಪ ಮಾಡುವುದು ಶೋಭೆ ತರುವಂತದ್ದಲ್ಲ ಎಂದರು. ನಮ್ಮ ಅವಧಿಯಲ್ಲಿ ಪೊಲೀಸ್ ಕ್ವಾಟ್ರಸ್‌ಗಳು ನಿರ್ಮಾಣ ಮಾಡಿದ್ದೇವೆ ಎಂದು ತಿಳಿಸಿದರು.

ತಳಕು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ದ್ರಾಕ್ಷಾಯಣಮ್ಮ ಮಾತನಾಡಿ ತಳಕು ಮತ್ತು ಮೊಳಕಾಲ್ಮೂರು ಕ್ಷೇತ್ರದಲ್ಲಿ ತಳಕು ಅತೀ ದೊಡ್ಡ ಹೋಬಳಿ ಕೇಂದ್ರವಾಗಿದ್ದು, ಇಲ್ಲಿನ ಎಲ್ಲಾ ಸುತ್ತ-ಮುತ್ತಲಿನ ಕಾರ್ಮಿಕರುಗಳು ಕೆಲಸವನ್ನು ಅರಿಸಿ ರಾಜ್ಯದ ರಾಜದಾನಿಯಾದ ಬೆಂಗಳೂರಿಗೆ ಕೆಲಸಕ್ಕೆಂದು ಹೋಗಲು ದಿನಕ್ಕೊಂದು ಬಾರಿ ರೈಲನ್ನು ಅವಲಂಬಿಸಿ ರುತ್ತಾರೆ. ಈ ರೈಲು ಹೊಸಪೇಟೆ ಮಾರ್ಗ ದಿಂದ ತಳಕು ಮಾರ್ಗವಾಗಿ ಬೆಂಗಳೂರಿಗೆ ಹೋಗುತ್ತದೆ. ತಳಕು ರೈಲ್ವೆ ನಿಲ್ದಾಣಕ್ಕೆ ಸಂಜೆ 7:00 ಗಂಟೆ ಸಮಯಕ್ಕೆ ಬರುತ್ತದೆ ಆದರೆ ತಳಕು ರೈಲ್ವೆ ಸ್ಟೇಷನಿನಲ್ಲಿ ರೈಲು ನಿಲುಗಡೆ ಇಲ್ಲದಿರುವ ಕಾರಣ ಸುಮಾರು ಪ್ರಯಾಣಿಕರಿಗೆ ನಿರಾಶಯದಾಯಕ ರಾಗಿರುತ್ತಾರೆ. ಮೊಳಕಾಲ್ಮೂರು ಶಾಸಕ ಎನ್.ವೈ.ಗೋಪಾಲಕೃಷ್ಣ ರವರಿಗೆ ಮನವಿ ಮಾಡಿಕೊಂಡರು. ಎನ್. ವೈ.ಗೋಪಾಲಕೃಷ್ಣ ಮಾತನಾಡಿ ಇದಕ್ಕೆ ಸಂಬಂಧಪಟ್ಟ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಚರ್ಚಿಸುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಾದ ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಮತ್ತು ಕೆಪಿಸಿಸಿ ಸದಸ್ಯರು ಬಾಲರಾಜು, ಕೆಪಿಸಿಸಿ ಎಸ್.ಸಿ ಮೋರ್ಚಾ ರಾಜ್ಯ ಸಂಚಾಲಕರಾದ ಹಿರೇಹಳ್ಳಿ ಮಲ್ಲೇಶ್, ತಳಕು ಮತ್ತು ನಾಯಕನಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ನಾಗೇಶ್‌ರೆಡ್ಡಿ, ಗೌರಸಮುದ್ರ ಅಧ್ಯಕ್ಷರಾದ ಓಬಣ್ಣ, ಹಿರೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಾಜಣ್ಣ, ತಳಕು ಗ್ರಾಮ ಪಂಚಾಯಿತಿ ಅಧ್ಯಕ್ಷರು ದ್ರಾಕ್ಷಾಯಣಮ್ಮ, ಪೊಲೀಸ್ ವೃತ್ತ ನಿರೀಕ್ಷರಾದ ಕೆ.ಸಮೀಉಲ್ಲ, ಪೊಲೀಸ್ ಉಪ ನಿರೀಕ್ಷರಾದ ಲೋಕೇಶ್, ಗಾದ್ರಿಲಿಂಗಪ್ಪ, ಬಂಡೆ ಕಪಿಲೆ ಓಬಣ್ಣ, ಅಶ್ವತ್ ನಾಯಕ, ಬೇಡರೆಡ್ಡಿಹಳ್ಳಿ ಗ್ರಾಮ ಪಂಚಾಯಿತಿ ಪಿಡಿಓ ಕೊರ್ಲಯ್ಯ, ತಳಕು ಗ್ರಾ.ಪಂ. ಪಿಡಿಓ ಓಬಣ್ಣ, ಹಾಗೂ ಇನ್ನೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರುಗಳು ಹಾಗೂ ಇನ್ನೀತರರು ಇದ್ದರು.

### ಎಚ್‌ಪಿಪಿಸಿ ಕಾಲೇಜು ಅತಿಥಿ ಉಪನ್ಯಾಸಕರ ತರಗತಿ ಬಹಿಷ್ಕಾರ ಕಾರ್ಯಕ್ರಮ

## ಅತಿಥಿ ಉಪನ್ಯಾಸಕರು, ಸಪ್ರಾಂಶುಪಾಲರ ವಾಗ್ವಾದ

» **ಚಳ್ಳಕೆರೆ**

ನಗರದ ಎಚ್‌ಪಿಪಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರ ಸಂಘದ ವತಿಯಿಂದ ನ.23ರಿಂದ ತಮ್ಮ ಸೇವಾ ಖಾಯಾಂತಿಗಾಗಿ ಒತ್ತಾಯಿಸಿ ತರಗತಿ ಬಹಿಷ್ಕರಿಸುವ ಕಾರ್ಯ ಹಮ್ಮಿಕೊಂಡಿದ್ದು ಅದರಂತೆ ಅತಿಥಿ ಉಪನ್ಯಾಸಕರು ಕಾಲೇಜು ಮುಂಭಾಗದಲ್ಲಿ ಧರಣಿ ಸತ್ಯಾಗ್ರಹ ನಡೆಸುವ ಮೂಲಕ ತಮ್ಮ ಬೇಡಿಕೆ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಲ್ಲೂಕು ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಜೆ.ಬಸವರಾಜು, ಪ್ರಸ್ತುತ ಸುಮಾರು 60ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಇಂದು ತರಗತಿ ಬಹಿಷ್ಕರಿಸಿ ಮುಷ್ಕರದಲ್ಲಿ ನಿರತರಾಗಿದ್ದಾರೆ. ಅತಿಥಿ ಉಪನ್ಯಾಸಕರ ಮುಷ್ಕರದಿಂದ ವಿದ್ಯಾರ್ಥಿಗಳಿಗೆ ಅನಿವಾರ್ಯವಾಗಿ ಬೋಧನೆಯಲ್ಲಿ ವ್ಯತ್ಯವಾಗುತ್ತಿದೆ. ಆದರೆ, ನಾವೆಲ್ಲರೂ ಕಳೆದ ಹತ್ತಾರು ವರ್ಷಗಳಿಂದ ಇದನ್ನೇ ನಂಬಿಕೊಂಡು ಕಾರ್ಯನಿರ್ವಹಿಸುತ್ತಿದ್ದೇವೆ. ನಿರಂತರ ಸರ್ಕಾರದ ಭರವಸೆಯಿಂದ ನಾವು ಈಗಾಗಲೇ ಬೇಸರಕ್ಕೀಡಾಗಿದ್ದೇವೆ. 20 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರೂ ಖಾಯಂ ಮಾಡುತ್ತಿಲ್ಲ, ಅನಿವಾರ್ಯವಾಗಿ ನಮ್ಮ ಬದುಕಿನ ಹಿತದೃಷ್ಠಿಯಿಂದ ಬೀದಿಗಿಳಿದು ಹೋರಾಟ ನಡೆಸಬೇಕಿದೆ ಎಂದು ಆಕ್ರೋಶ ಹೊರಹಾಕಿದರು.

ಕಾಲೇಜಿನ ಸಭಾಂಗಣದ ಬಳಿಯೇ ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿ ಮುಷ್ಕರದಲ್ಲಿ ನಿರತರಾದ ಸಂದರ್ಭದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಕಾಲೇಜು ಪ್ರಾಂಶುಪಾಲ ಡಾ.ಆರ್. ರಂಗಪ್ಪ, ವಿಶ್ವವಿದ್ಯಾಲಯದ ಜಂಟಿ ನಿರ್ದೇಶಕ



ಸೂಚನೆಯಂತೆ ಯಾರು, ಯಾರು ಇಂದು ತರಗತಿ ಬಹಿಷ್ಕರಿಸಿ ಮುಷ್ಕರದಲ್ಲಿ ಭಾಗವಹಿಸಿದ್ದೀರ ಅವರೆಲ್ಲಾ ವೈಯಕ್ತಿಕ ಲಿಖಿತ ಬರೆದು ಕೊಡಲು ಸೂಚನೆ ನೀಡಲಾಗಿದೆ. ತಾವು ನೀಡಿದ ಪತ್ರವನ್ನು ನಾನು ವಿಶ್ವವಿದ್ಯಾಲಯದ ಜಂಟಿ ನಿರ್ದೇಶಕರಿಗೆ ಕಳಿಸಿಕೊಡಬೇಕು. ಆದ್ದರಿಂದ ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಮುಷ್ಕರದಲ್ಲಿ ಭಾಗವಹಿಸಿದ ಬಗ್ಗೆ ಲಿಖಿತ ಮನವಿ ಕೊಡುವಂತೆ ಸೂಚನೆ ನೀಡಿದರು. ಪ್ರಾಂಶುಪಾಲರ ಸೂಚನೆಯಿಂದ ಕೆಂಡಮಂಡಲರಾದ ಅತಿಥಿ ಉಪನ್ಯಾಸಕರು ನಮ್ಮ ಸಂಘದ ರಾಜ್ಯಾಧ್ಯಕ್ಷ ಸೂಚನೆಯಂತೆ ನಾವು ಮುಷ್ಕರ ಮಾಡುತ್ತಿದ್ದೇವೆ. ಪ್ರತ್ಯೇಕವಾಗಿ ಬರೆದುಕೊಡುವಂತೆ ನಮಗೆ ಸೂಚನೆ ನೀಡಿಲ್ಲ. ನೀವು ಈ ಬಗ್ಗೆ ಜಂಟಿ ನಿರ್ದೇಶಕ ಆದೇಶ ಪ್ರತಿಯನ್ನು ನಮಗೆ ನೀಡಿದರೆ ಆ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವ ಹಠಹಿಡಿದಲ್ಲದೆ, ಪ್ರಾಂಶುಪಾಲರ ಸೂಚನೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಈ ಮಧ್ಯ ಅತಿಥಿ ಉಪನ್ಯಾಸಕ ಜಿಲ್ಲಾ ಸಂಘದ ಅಧ್ಯಕ್ಷ ಡಾ.ಯಶೋಧರ ಮಾತನಾಡಿ, ರಾಜ್ಯದ ಯಾವುದೇ ಕಾಲೇಜಿನಲ್ಲಿ ಅಲ್ಲಿ ಪ್ರಾಂಶುಪಾಲರು ಈ ರೀತಿ ಸೂಚನೆ ನೀಡಲ್ಲ. ಆದರೆ, ಇಲ್ಲಿ ಮಾತ್ರ ಸೂಚನೆ ನೀಡುತ್ತಾರೆಂದರೆ ಅರ್ಥವೇನು. ರಾಜ್ಯ ಸಂಘದ ಕರೆಯಂತೆ ನಾವು ಮುಷ್ಕರ ಮುಂದುವರೆಸುತ್ತೇವೆ. ಯಾವುದಕ್ಕೂ ಹೆದುರುವ ಪ್ರಶ್ನೆಯಿಲ್ಲವೆಂದರು. ಆದರೆ, ಪ್ರಾಂಶುಪಾಲ ರಂಗಪ್ಪ ಮಾತ್ರ ಅಥಿತಿ ಉಪನ್ಯಾಸಕರ ನಡೆಯ ಬಗ್ಗೆ ತಮ್ಮ ಅಸಮದಾನ, ಆಕ್ರೋಶವನ್ನು ಮುಂದುವರೆಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಘದ ಡಾ.ಜಗದೀಶ್‌ಕರೆನಹಳ್ಳಿ, ನರಹರಿ, ಮಂಜುನಾಥ, ಶಿವಪ್ರಸಾದ್, ತಾಲ್ಲೂಕು ಸಂಘದ ಉಪಾಧ್ಯಕ್ಷೆ ಶಿಲ್ಪ, ಓ.ಶ್ರೀನಿವಾಸ್, ಯರ್ರಿಸ್ವಾಮಿ, ಡಿ.ಟಿ.ಸುರೇಶ್, ಮಹಮ್ಮದ್‌ವಲಿವುಲ್ಲಾ, ಮಾರುತಿ, ಅಶ್ವಿನಿದೇಸಾಯಿ, ಸಿ.ಎ.ಬಸವರಾಜು, ಮಧುಸೂದನ್, ಬ್ರಹ್ಮನಂದರೆಡ್ಡಿ, ಶೋಭಾ, ಬಸವರಾಜುಕೋಲ್ಕರ್ ಭಾಗವಹಿಸಿದ್ದರು.



**ಚಳ್ಳಕೆರೆ ನಗರದ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ 536ನೇ ಕನಕ ಜಯಂತಿ ಕಾರ್ಯಕ್ರಮಕ್ಕೆ ಇಒ ಶಶಿಧರ ಚಾಲನೆ ನೀಡಿದರು. ಸಂತೋಷ್, ಸಂಪತ್‌ಕುಮಾರ್, ಮಹೇಂದ್ರ ಮೊದಲಾದವರು ಇದ್ದರು.**

### ಟಿ.ನುಲೆನೂರುಶಂಕರಪ್ಪನವರ ಆದರ್ಶ ಹೋರಾಟ ನಮಗೆ ಸದಾಸ್ಫೂರ್ತಿದಾಯಕ: ಭೂತಯ್ಯ



» **ಚಳ್ಳಕೆರೆ**

ನೀರಾವರಿ ಹೋರಾಟಗಾರ, ಮಹಾನ್ ನಾಯಕರಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಬಡಗಲಪುರ ನಾಗೇಂದ್ರಪ್ಪ ಬಣ) ರಾಜ್ಯಪ್ರಧಾನ ಕಾರ್ಯದರ್ಶಿ ಟಿ.ನುಲೆನೂರುಶಂಕರಪ್ಪ ಮೊದಲಿಗರು ಎಂದು ರೈತ ಸಂಘದ ರಾಜ್ಯ ಹಿರಿಯ ಉಪಾಧ್ಯಕ್ಷ ಕೆ.ಪಿ.ಭೂತಯ್ಯ ತಿಳಿಸಿದರು.

ಅವರು, ನಗರದ ಪ್ರವಾಸಿಮಂದಿರದಲ್ಲಿ ಇತ್ತೀಚಿಗಷ್ಟೇ ನಮ್ಮನ್ನು ಅಗಲಿದ ರೈತ ಸಂಘದ ಹಿರಿಯ ಚೇತನ ಹಾಗೂ ಭದ್ರಾ ಮೇಲ್ದಂಡೆ ಯೋಜನೆಯ ಜಾರಿಯ ಪ್ರಮುಖ ರೂವಾರಿಗಳಲ್ಲಿ ಒಬ್ಬರಾದ ಟಿ.ನುಲೆನೂರುಶಂಕರಪ್ಪನವರ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಸುಮಾರು 50 ವರ್ಷಗಳ ಕಾಲ ರೈತ ಸಂಘಟನೆಯೂ ಸೇರಿದಂತೆ ಇತರ ಪ್ರಗತಿಪರ ಸಂಘಟನೆಗಳಲ್ಲಿ ರೈತರು, ಕಾರ್ಮಿಕರು, ಇನ್ನಿತರ ಹಲವಾರು ಹೋರಾಟಗಳಲ್ಲಿ ಭಾಗವಹಿಸಿ ಸಮಾಜ ಮುಖಿಚಟುವಟಿಕೆಗಳಲ್ಲಿ ಸ್ವಯಂಪ್ರೇರಣೆಯಿಂದ ಕಾರ್ಯಕ್ಷೇತ್ರಕ್ಕೆ ಇಳಿದು ಎಲ್ಲರಿಗೂ ನ್ಯಾಯದೊರಕಿಸಿಕೊಡುವಂತಹ ಪುಣ್ಯ ಕೆಲಸವನ್ನು ಶಂಕರಪ್ಪನವರು ಮಾಡಿದ್ದಾರೆ, ಹಗಲು ರಾತ್ರಿ ಎನ್ನದೆ ಸಂಘಟನೆಗೆ ದುಡಿದಿದ್ದಾರೆ, ರೈತ ಸಂಘಟನೆಯಲ್ಲಿ ಗ್ರಾಮ, ತಾಲ್ಲೂಕು, ಜಿಲ್ಲಾ, ರಾಜ್ಯಮಟ್ಟದಲ್ಲಿ ತನ್ನದೇಯಾದ ದಕ್ಷತಾ ಕಾರ್ಯದ ಮೂಲಕ ವಿಶೇಷ ಛಾಪು ಮೂಡಿಸಿದ್ದರು ಎಂದರು.

ಪತ್ರಕರ್ತ ಕೆ.ಎಸ್.ರಾಘವೇಂದ್ರ ಮಾತನಾಡಿ, ರೈತ ಸಂಘಟನೆಯ ಹಿರಿಯ ರೂವಾರಿ ನೆಲೆನೂರು ಶಂಕರಪ್ಪ ಸದಾಕ್ರಿಯಾಶೀಲ ವ್ಯಕ್ತಿಯಾಗಿ ಎಲ್ಲಾ ಕ್ಷೇತ್ರಗಳಲ್ಲೂ ಕಾರ್ಯನಿರ್ವಹಿಸಿದವರು. ರೈತ ಸಮಸ್ಯೆ ಯಾವುದೇ ಇರಲಿ ಎಲ್ಲೇ ಇರಲಿ ಸ್ವಯಂ ಪ್ರೇರಣೆಯಿಂದ ಭಾಗವಹಿಸಿ ಸರ್ಕಾರ ಮತ್ತು ರೈತರ ನಡುವೆ ಸ್ನೇಹ ಸೇತುವೆಯಾಗಿ ಕಾರ್ಯನಿರ್ವಹಿಸಿದವರು. ಎಂದಿಗೂ ಸಹ ಯಾವುದನ್ನೂ ಎದುರಾಕಿಕೊಳ್ಳದೆ ಸಂಯಮ, ಸಮದಾನದಿಂದ ಕಾರ್ಯನಿರ್ವಹಿಸುತ್ತಿದ್ದರು. ಅಧಿಕಾರಿ ವರ್ಗಕ್ಕೂ ವಿಶೇಷ ಗೌರವ ನೀಡುತ್ತಿದ್ದ ವ್ಯಕ್ತಿ. ನಾಡಿನ ಹೆಮ್ಮೆಯ ದಿನಪತ್ರಿಕೆ ಏಜೆಂಟರಾಗಿ ಕಾರ್ಯನಿರ್ವಹಿಸಿ ಪತ್ರಿಕೋದ್ಯಮದಲ್ಲೂ ಸಹ ತಮ್ಮ ಕಾರ್ಯಕ್ಷೇತ್ರ ವಿಸ್ತರಿಸಿ ತಾವೊಬ್ಬ ಸಮರ್ಥನಾಯಕ ಎಂಬುವುದನ್ನು ನಿರೂಪಿಸಿದರು. ಅವರ ಹೋರಾಟಗಳು ನಮ್ಮೆಲ್ಲರಿಗೂ ಸದಾ ಆದರ್ಶವಾಗಿರುತ್ತವೆ ಎಂದರು.

**ಪ್ರಮುಖ ಸುದ್ದಿ**


### ಇಂಜಿನಿಯರಿಂಗ್ ಕಾಲೇಜಿನ ಅರೆಕಾಲಿಕ ಉಪನ್ಯಾಸಕರ ತರಗತಿ ಬಹಿಷ್ಕಾರ

# ಬೇಡಿಕೆ ಈಡೇರಿಸಲು ಉಪನ್ಯಾಸಕರ ಪಟ್ಟು

» **ಚಳ್ಳಕೆರೆ**

ಅಖಿಲ ಕರ್ನಾಟಕ ಇಂಜಿನಿಯರಿಂಗ್ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನ. 29ರಿಂದ ಅನಿದಿಷ್ಟಾವಧಿಯವರೆಗೆ ತರಗತಿಗಳನ್ನು ಬಹಿಷ್ಕರಿಸಿ ಮೌನವಾಗಿ ಮುಷ್ಕರ ನಡೆಸುವಂತೆ ರಾಜ್ಯ ಸಂಘದ ಕರೆಯ ಮೇರೆಗೆ ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಅತಿಥಿ ಉಪನ್ಯಾಸಕರು ತರಗತಿಗಳನ್ನು ಬಹಿಷ್ಕರಿಸಿ ಮುಷ್ಕರ ನಡೆಸಿದರು.

ಅತಿಥಿ ಉಪನ್ಯಾಸಕ ಸಂಘದ ಪ್ರತಿನಿಧಿ, ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಸಹನ ಮಾತನಾಡಿ, ಪ್ರಸ್ತುತ ಇಂಜಿನಿಯರಿಂಗ್ ಕಾಲೇಜಿನಲ್ಲಿ 400ಕ್ಕೂಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಕೇವಲ ಮೂವರು ಖಾಯಂ ಉಪನ್ಯಾಸಕರು ಮಾತ್ರ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ, 400 ವಿದ್ಯಾರ್ಥಿಗಳಿಗೆ




ಬೋಧನೆಯನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ನಮ್ಮ ಸಂಘದ ವತಿಯಿಂದ ಮಾಹೆಯಾನ ಕೇವಲ 15 ಸಾವಿರ ಗೌರವ ಧನದಲ್ಲಿ ನಾವು ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸಾಕಷ್ಟು ಶ್ರಮವಹಿಸುತ್ತಿದ್ದೇವೆ. ವಿದ್ಯಾರ್ಥಿಗಳು ಸಹ ನಮ್ಮ ಬೋಧನೆಯ ಬಗ್ಗೆ ಸಂತೃಪ್ತಿತರಾಗಿದ್ದಾರೆ. ಆದರೆ, ಸರ್ಕಾರ ಮಾತ್ರ ಮಲತಾಯಿ ಧೋರಣೆಯನ್ನು ಅನುಸರಿಸಿ ನಮಗೆ ಅನಗತ್ಯ ಸಮಸ್ಯೆ ಉಂಟು ಮಾಡಿದ್ದು, ಕೂಡಲೇ ಸೇವೆಯನ್ನು ಖಾಯಂಗೊಳಿಸಿ, ಸೇವಾ ಭದ್ರತೆಯನ್ನು ನೀಡಬೇಕೆಂದು ಆಗ್ರಹಿಸಿದರು.

ಅತಿಥಿ ಉಪನ್ಯಾಸಕಿ ಸ್ವಾತಿ ಮಾತನಾಡಿ, ಒಟ್ಟು ಮೂರು ಭೇಡಿಕೆಗಳನ್ನು ಮುಂದಿಟ್ಟುಕೊಂಡು ನಾವು ಮುಷ್ಕರದಲ್ಲಿ ನಿರತರಾಗಿದ್ದು, ಕೃಪಾಂಕ, ಸೇವಾ ಪ್ರಮಾಣ ಪತ್ರ, ಖಾಯಂಗೊಳಿಸಬೇಕು, ಪ್ರತಿತಿಂಗಳ ವೇತನ ನೀಡಬೇಕು ಮುಂತಾದವುಗಳನ್ನು ಸರ್ಕಾರ ಈ ಮೂರು ಬೇಡಿಕೆಗಳನ್ನು ಈಡೇರಿಸಿ ನಮ್ಮ ಬದುಕಿಗೆ ಭದ್ರತೆ ಒದಗಿಸಬೇಕೆಂದು ತಿಳಿಸಿದರು. ಮುಷ್ಕರದಲ್ಲಿ ಅತಿಥಿ ಉಪನ್ಯಾಸಕರಾದ ಪೂಜಾ, ರಾಜಲಕ್ಷ್ಮಿ, ಚೈತ್ರ, ಭಾವನ, ಆನಂದಸಾಗರ್, ಪಿ.ಚೈತ್ರ, ರಮೇಶ್, ತಿಪ್ಪೇಸ್ವಾಮಿ, ನಾಗಾರ್ಜುನ್, ಶಿವರಾಜು, ವರ್ಷ, ಅನುಷ, ಗೀತಾ, ಹರ್ಷಿತ, ಕೈರೂನ್ನಿಸ ಉಪಸ್ಥಿತರಿದ್ದರು.

ಫಾಸ್ಟ್ ನ್ಯೂಸ್

## ಜಿಲ್ಲಾ ಮಟ್ಟದ ಯುವಜನೋತ್ಸವ ಸ್ಪರ್ಧೆ ಡಿ.07 ರಂದು

» **ಚಿತ್ರದುರ್ಗ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಡಿಸೆಂಬರ್ 07 ರಂದು ಬೆಳಿಗ್ಗೆ 10.30ಕ್ಕೆ ಚಿತ್ರದುರ್ಗ ನಗರದ ಜಿಲ್ಲಾ ಕ್ರೀಡಾಂಗಣ ಸಭಾಂಗಣದಲ್ಲಿ 2023-24ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವದ ಆಯ್ಕೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಯಲ್ಲಿ ಜಾನಪದ ನೃತ್ಯ ಹಾಗೂ ಗೀತೆ ಗಾಯನ ಸ್ಪರ್ಧೆಯಲ್ಲಿ ವೈಯಕ್ತಿಕ ಹಾಗೂ 10 ಜನರ ತಂಡವಾಗಿ ಪಾಲ್ಗೊಳ್ಳಬಹುದು. ವೈಯಕ್ತಿಕ ಸ್ಪರ್ಧೆಗೆ 7 ನಿಮಿಷ ಹಾಗು ಗುಂಪು ಸ್ಪರ್ಧೆಗೆ 15 ನಿಮಿಷ ಕಾಲವಕಾಶ ನೀಡಲಾಗುವುದು. ಇದರೊಂದಿಗೆ ನಿಯಮಗಳಿಗೆ ಒಳಪಟ್ಟು ಕಥೆ ಬರವಣಿಗೆ, ಪೋಸ್ಟರ್ ಮೇಕಿಂಗ್, ಭಾಷಣ ಹಾಗೂ ಛಾಯಚಿತ್ರ ಸ್ಪರ್ಧೆಗಳು ಜರುಗಲಿವೆ. ಚಿತ್ರದುರ್ಗ ಜಿಲ್ಲೆಯ 15 ರಿಂದ 29 ವರ್ಷದ ಒಳಗಿನವರು ಮಾತ್ರ ಪಾಲ್ಗೊಳ್ಳು ಅವಕಾಶವಿದ್ದು, ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅಥವಾ ಇತರೆ ಜನ್ಮದಿನಾಂಕ ದೃಢೀಕರಣ ಪತ್ರ ಹಾಜರು ಪಡಿಸಬೇಕು. ಸ್ಪರ್ಧೆಗಳು ಬೆಳಗ್ಗೆ 10.30 ರಿಂದ ಪ್ರಾರಂಭವಾಗಲಿರುವುದರಿಂದ 10 ಗಂಟೆಯ ಒಳಗಾಗಿ ಸ್ಪರ್ಧಾಳುಗಳೂ ವರದಿ ಮಾಡಿಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ವಿಜೇತರಾದವರು ರಾಜ್ಯ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಭಾಗವಹಿಸಬಹುದು. ರಾಜ್ಯ ಮಟ್ಟದಲ್ಲಿ ವಿಜೇತರಾದವರು ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಬಹುದು. ಯುವಜನೋತ್ಸವ ಸ್ಪರ್ಧೆಗಳಲ್ಲಿ ಭಾಗವಹಿಸಿಸುವವರಿಗೆ ತಾಲ್ಲೂಕು ಕೇಂದ್ರಸ್ಥಾನದಿಂದ ಜಿಲ್ಲಾ ಕೇಂದ್ರಸ್ಥಾನಕ್ಕೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ನೀಡಲಾಗುವುದು. ಮಟ್ಟದ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು, ಮಹಿಳಾ ಸಂಘ ಸಂಸ್ಥೆಗಳು, ಜಿಲ್ಲೆಯ ಎಲ್ಲಾ ತಾಲ್ಲೂಕಿನಿಂದ ಸ್ಪರ್ಧಾಳುಗಳು ಭಾಗವಹಿಸಿ ಈ ಅವಕಾಶವ ಉಪಯೋಗಿಸಿಕೊಳ್ಳುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ 08194-235635 ಗೆ ಸಂಪರ್ಕಿಸಬಹುದು.

## ರೋಟರಿ ಬಾಲಭವನದಲ್ಲಿ ಸಂವಿಧಾನ ದಿನಾಚರಣೆ




» **ಚಿತ್ರದುರ್ಗ**

ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಸ್ವಾತಂತ್ರ್ಯ, ಸಮಾನತೆಯ ಆಧಾರದ ಮೇಲೆ ಭದ್ರವಾದ ಸಂವಿಧಾನ ರಚಿಸಿ ದೇಶಕ್ಕೆ ಕೊಡುಗೆಯಾಗಿ ನೀಡಿದ್ದಾರೆಂದು ಚಳ್ಳಕೆರೆಯ ಶ್ರೀಮತಿ ಕೋಟೆ ಬೋರಮ್ಮ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ.ಸಂಜೀವಕುಮಾರ ಪೋತೆ ಹೇಳಿದರು.

ರೋಟರಿ ಕ್ಲಬ್ ಚಿತ್ರದುರ್ಗ ವತಿಯಿಂದ ರೋಟರಿ ಬಾಲಭವನದಲ್ಲಿ ಬುಧವಾರ ನಡೆದ ಭಾರತ ಸಂವಿಧಾನ ಅಂಗಿಕಾರವಾದ ದಿನ ಉದ್ದೇಶಿಸಿ ಮಾತನಾಡಿದರು.ಸಂವಿಧಾನದ ಮೌಲ್ಯಗಳನ್ನು ಪ್ರತಿಯೊಬ್ಬರು ಓದಿ ತಿಳಿದುಕೊಂಡಾಗ ಮಾತ್ರ ಫಲವತ್ತಾದ ದೇಶ ಕಟ್ಟಬಹುದು. ಸಂವಿಧಾನಕ್ಕಿಂತ ಶ್ರೇಷ್ಟವಾದುದು ಯಾವುದೂ ಇಲ್ಲ. ಸಾಮನ್ಯ ಪ್ರಜೆಗಳು ದೇಶ ಆಳಬಹುದು ಎನ್ನುವ ಶಕ್ತಿಯನ್ನು ಸಂವಿಧಾನ ನೀಡಿದೆ. ಸಂವಿಧಾನದ ಆಚರಣೆ ಮೂಲಕ ಅಸ್ಪೃಶ್ಯತೆ, ಅಸಮಾನತೆಯನ್ನು ತೊಡೆದು ಹಾಕಬಹುದು. ಸಂವಿಧಾನದ ಓದು ಜ್ಞಾನ ನೀಡುವ ಗಣಿ ಎಂದು ಸಂವಿಧಾನದ ಮಹತ್ವ ತಿಳಿಸಿದರು.

ಸಂವಿಧಾನ ರಚನೆಗೂ ಮುನ್ನ ಎಂಟು ಸಾವಿರ ಪುಟಗಳ ಚರ್ಚೆಯಾಗುತ್ತದೆ. 395 ಅನುಚ್ಛೇದಗಳಿವೆ. 1949 ನ. 26 ರಂದು ಸಂವಿಧಾನ ಅಂಗೀಕಾರವಾದ ದಿನ. ಸಂವಿಧಾನವನ್ನು ಎಲ್ಲರೂ ಅರ್ಥಮಾಡಿಕೊಂಡಾಗ ಮಾತ್ರ ತುಳಿತಕ್ಕೊಳಗಾದವರು, ಶೋಷಿತರು, ಹಿಂದುಳಿದವರನ್ನು ಮೇಲಕ್ಕೆತ್ತಬಹುದು. ಸಂವಿಧಾನದ ಆಶಯ ಯಾವುದೇ ಒಂದು ಜಾತಿ, ಧರ್ಮದ ಪರವಲ್ಲ. ಎಲ್ಲರಿಗೂ ಸಮಾನತೆಯನ್ನು ನೀಡಿದೆ. ಪ್ರತಿಯೊಬ್ಬ ನಾಗರೀಕನ ಆತ್ಮಗೌರವವನ್ನು ಸಂವಿಧಾನ ಎತ್ತಿ ಹಿಡಿಯುತ್ತಿದೆ. ಪ್ರಜಾಪ್ರಭುತ್ವದ ಮೂಲ ಪರಿಕಲ್ಪನೆ ಬುದ್ದನದಾಗಿದೆ. ಹಾಗಾಗಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಬೌದ್ದ ಧರ್ಮಕ್ಕೆ ಸೇರ್ಪಡೆಯಾದರು ಎಂದು ಹೇಳಿದರು.ನಮಗೆ ನಾವೇ ಸಂವಿಧಾನವನ್ನು ಅರ್ಪಿಸಿಕೊಂಡಿರುವುದರಿಂದ ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಭಾವನೆ ಅಳವಡಿಸಿಕೊಂಡಿದ್ದೇವೆ. ದೇಶವನ್ನು ಯಾವುದೇ ಧರ್ಮ, ದೇವತೆಗಳು ಆಳುವುದಿಲ್ಲ. ಸ್ವತಂತ್ರ ಭಾರತ ಸಂವಿಧಾನ ರಚಿಸುವ ಕಾರ್ಯವು 1946 ಡಿಸೆಂಬರ್ 9 ರಿಂದ ಆರಂಭಗೊಂಡು 296 ಸದಸ್ಯರನ್ನು ಹೊಂದಿತ್ತು ಎಂದರು. ರೋಟರಿ ಕ್ಲಬ್ ಚಿತ್ರದುರ್ಗದ ಅಧ್ಯಕ್ಷ ರೊ. ಪಿ.ಹೆಚ್.ಎಫ್. ಬಿ.ಎಸ್.ಕನಕರಾಜ್, ಜಂಟಿ ಕಾರ್ಯದರ್ಶಿ ವಿಶ್ವನಾಥ್ ವೇದಿಕೆಯಲ್ಲಿದ್ದರು.ಎಸ್.ವೀರೇಶ್, ಎಂ.ಸಿ.ವೆಂಕಟೇಶ್, ವಿಶ್ವನಾಥಬಾಬು, ಮಧುಪ್ರಸಾದ್, ಮೈಲೇಶ್, ಹೆಗ್ಗನಗೌಡ್ರು, ರೋಟರಿ ಕ್ಲಬ್ ಚಿನ್ಮೂಲಾದ್ರಿ ಅಧ್ಯಕ್ಷ ಶಂಕರಪ್ಪ, ಕುರುಬರಹಳ್ಳಿ ಶಿವಣ್ಣ, ಎಸ್.ಎನ್.ರವಿಕುಮಾರ್, ಪ್ರೀತಿ ಕನಕರಾಜ್, ಸರಸ್ವತಿ ವೆಂಕಟೇಶ್ ಇನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ತಂತ್ರಜ್ಞಾನಕ್ಕೆ ತಕ್ಕಂತೆ ಕನ್ನಡದಲ್ಲಿ ತೀರ್ಪು

» **ದಾವಣಗೆರೆ**

ಆಯಾ ಪ್ರಾಂತ್ಯದ ಭಾಷೆಗೆ ತಕ್ಕಂತೆ ಅಲ್ಲಿನ ನ್ಯಾಯಾಲಯಗಳು ಮಾತೃ ಭಾಷೆಯಲ್ಲಿಯೇ ತೀರ್ಪುಗಳನ್ನು ನೀಡಬೇಕೆನ್ನುವ ಮಹತ್ವದ ನಿರ್ಧಾರದಿಂದಾಗಿ ಈ ಹಿಂದೆ ಆಂಗ್ಲ ಭಾಷೆಯಲ್ಲಿ ನೀಡಲಾಗುತ್ತಿದ್ದ ರಾಜ್ಯದ ಎಲ್ಲಾ ನ್ಯಾಯಾಲಯಗಳ ತೀರ್ಪುಗಳನ್ನು ಇದೀಗ ಕನ್ನಡ ಭಾಷೆಗಳಿಗೆ ಅನುವಾದ ಮಾಡುವ ಕುರಿತಂತೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ. ಎನ್.ಹೆಗಡೆ ತಿಳಿಸಿದರು.

ಗುರುವಾರ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ತಂತ್ರಜ್ಞಾನಕ್ಕೆ ತಕ್ಕಂತೆ ಕನ್ನಡದಲ್ಲಿ ತೀರ್ಪುಗಳನ್ನು ನೀಡುವ ನಿಟ್ಟಿನಲ್ಲಿ ಎಲ್ಲಾ ತಂತ್ರಾಂಶಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ. ನಮ್ಮ ನಮ್ಮ ಮಾತೃಭಾಷೆಗಳಲ್ಲಿ ತೀರ್ಪುಗಳು ಸಿಗುವುದರಿಂದ ನ್ಯಾಯಾಲಯ ನಡೆಯುವ ಕಲಾಪಗಳು ನಮಗೆ ಮನದಟ್ಟಾಗುತ್ತವೆ. ಈ ನಿಟ್ಟಿನಲ್ಲಿ ತೀರ್ಪುಗಳನ್ನು ಕನ್ನಡದಲ್ಲಿ ನೀಡುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಹೇಳಿದರು.

ಕಾನೂನು ಸೇವಾ ಪ್ರಾಧಿಕಾರದ ಮೂಲಕ ಜಿಲ್ಲಾಯ ಎಲ್ಲಾ ಗ್ರಾಮಗಳಿಗೆ ತೆರಳಿ ನಾವು ಕಾನೂನುಗಳನ್ನು ಅರಿವನ್ನು ಮೂಡಿಸಲಾಗಿದೆ. ಆದರೆ ಸಹ ಈಗಲೂ



ಕೆಲವೆಡೆ ಕಾನೂನುಗಳ ಉಲ್ಲಂಘನೆ ಆಗುತ್ತಿರುವುದು ಕಂಡುಬರುತ್ತದೆ. ದ್ವಿಚಕ್ರ ವಾಹನಗಳಲ್ಲಿ ತ್ರಿಬಲ್ ರೈಡಿಂಗ್, ಡಿಎಲ್, ಇನ್ಸ್ಯೂರೆನ್ಸ್ ಸೇರಿದಂತೆ ಇನ್ನಿತರ ದಾಖಲೆಗಲು ಇಲ್ಲದೆ, ಹೆಲ್ಮೆಟ್ ಇಲ್ಲದೆ ಬೇಕಾಬಿಟ್ಟಿಯಾಗಿ ವಾಹನಗಳನ್ನು ಚಾಲನೆ ಮಾಡುತ್ತಾರೆ. ನಿಗದಿತ ವೇಗಕ್ಕಿಂತ ಅತಿ ಹೆಚ್ಚು ವೇಗವಾಗಿ ಓಡಿಸುವುದು ಕಂಡುಬರುತ್ತಿದೆ. ಎಲ್ಲಾ ಕಾನೂನುಗಳು ನಮಗಾಗಿಯೇ ಮಾಡಲಾಗುತ್ತಿದೆ. ಕಾರಣ ಅವುಗಳನ್ನು ಅರಿತು ನಡೆಯಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಇದಲ್ಲದೆ ನ್ಯಾಯಾಲಯದಲ್ಲಿ ನಡೆದ ಯಾವುದೇ ವ್ಯಾಜ್ಯಗಳಾಗಲಿ, ಸರಿಯಾದ ಸಾಕ್ಷ್ಯ ಮತ್ತು ಆಧಾರಗಳಿದ್ದರೆ ಮಾತ್ರ ಅಲ್ಲಿ ನ್ಯಾಯ ಸಿಗಲಿದೆ. ಇಲ್ಲವಾದಲ್ಲಿ ನ್ಯಾಯ ಸಿಗುವಲ್ಲಿ ವಿಳಂಬ ಆಗಲಿದೆ. ಇಂತಹ ವೇಳೆ ವಿನಾಕಾರಣ ನ್ಯಾಯಾಲುವನ್ನಾಗಲೀ, ವಕೀಲರನ್ನಾಗಲೀ ದೂಷಿಸುವುದು ಬೇಡ ಎಂದು ಸಲಹೆ ನೀಡಿದರು.

1956ರಲ್ಲಿ ಕನ್ನಡ ಮಾತನಾಡುವ ಪ್ರಾಂತ್ಯ ಸೇರಿಸಿ ಮೈಸೂರು, ನಂತರ 1973ರಲ್ಲಿ ಕರ್ನಾಟಕ ಎಂದು ಹೆಸರಾಯಿತು. ನಾವೆಲ್ಲಾ ಕನ್ನಡದಲ್ಲಿ ಮಾತನಾಡೋಣ. ನಮಗೆ ಅಲ್ಪ ಸ್ವಲ್ಪ ಬೇರೆ ಭಾಷೆ ಗೊತ್ತಿದ್ದರೆ ನಾವು ಕನ್ನಡ ಭಾಷೆಯಲ್ಲಿ ಮಾತನಾಡುವುದನ್ನು ಬಿಟ್ಟು ಬೇರೆ ಭಾಷೆಯಲ್ಲಿ ಮಾತನಾಡುತ್ತೇವೆ. ಅದು ಸರಿಯಲ್ಲ. ನಾವು ಬೇರೆಯವರಿಗೆ ಕನ್ನಡ ಕಲಿಸೋಣ ಎಂದು ಹೇಳಿದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವಪ್ಪ ಜಿ.ಸಲಗೆರೆ ಮಾತನಾಡಿ, ನಮ್ಮ ಕನ್ನಡ ಭಾಷೆಯನ್ನು ಉಳಿಸಬೇಕು. ಜಾಗೃತಿ ಮೂಡಿಸಬೇಕು. ಕನ್ನಡ ಭಾಷೆ ಪರಂಪರೆ, ಇತಿಹಾಸ ಹೊಂದಿದೆ. ಕನ್ನಡ ನಾಡನ್ನು ಕಟ್ಟಲು ನಮ್ಮ ಹಿರಿಯರು ಹೋರಾಟ ಮಾಡಿದ್ದಾರೆ. ಸಮಾಜದಲ್ಲಿ ಸ್ವಾಸ್ಥ್ಯ ವಾಗಿ ಬದುಕು ಸಾಗಿಸಬೇಕಾದರೆ ಕಾನೂನಿನ ಅರಿವು ಅಗತ್ಯ. ಪಂಚಭೂತಗಳಂತೆ ಕಾನೂನಿನ ಅರಿವು ಎಲ್ಲರೂ ಪಡೆಯಬೇಕು. ನಮ್ಮ ವರ್ತನೆಯಿಂದ ಇತರರ ಹಕ್ಕುಗಳು ಉಲ್ಲಂಘನೆ ಆಗಬಾರದು. ಕಾನೂನು, ನಿಯಮಗಳನ್ನು ಪಾಲನೆ ಮಾಡಿದರೆ ಯಾವುದೇ ತೊಂದರೆ ಆಗುವುದಿಲ್ಲ. ಅದರಲ್ಲೂ ಗ್ರಾಮೀಣ ಪ್ರದೇಶದ ಜನರಿಗೆ ಕಾನೂನಿನ ಅರಿವು ಕಡಿಮೆ ಇದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರ ರಾಷ್ಟ್ರ, ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಕಾನೂನು ಸೇವಾ ಪ್ರಾಧಿಕಾರ ಮಾಡಲಾಗಿದೆ ಎಂದು ಹೇಳಿದರು.

ನ್ಯಾಯಾಲಯದ ವ್ಯಾಜ್ಯಗಳು ಮಾತ್ರವಲ್ಲದೆ ಯಾವುದೇ ಸರ್ಕಾರಿ ಕಚೇರಿಯಲ್ಲಿ ನಿಮ್ಮ ಕೆಲಸ ಮಾಡಿಕೊಡಲು ವಿಳಂಬ ಮಾಡಿದರೆ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣವರ್ ಅವರನ್ನು ಸಂಪರ್ಕಿಸಿ ನ್ಯಾಯ ಪಡೆಯಬಹುದು. ಯಾವುದೇ ವ್ಯಕ್ತಿಯಾಗಲೀ ವಾರ್ಷಿಕ ಮೂರು ಲಕ್ಷ ಆದಾಯ ಕಡಿಮೆ ಇದ್ದ ಯಾವುದೇ ವರ್ಗದ ಜನರು ಕಾನೂನು ಸೇವಾ ಪ್ರಾಧಿಕಾರದಿಂದ ಉಚಿತ ಕಾನೂನು ಸಲಹೆ ಪಡೆಯಬಹುದು ಎಂದು ಮಾಹಿತಿ ನೀಡಿದರು.ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮ.ಕರೆಣ್ಣವರ ಮಾತನಾಡಿ, ಭಾವೈಕ್ಯತೆ, ಅಭಿಮಾನ, ಪ್ರೀತಿ ನಮ್ಮಲ್ಲಿ ಇರಬೇಕು. ಅಲ್ಲದೇ ನಾಡು ನುಡಿಯ ರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಹೇಳಿದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣಕುಮಾರ್ ಮಾತನಾಡಿ, ಕನ್ನಡ ಪರ ಸಂಘಟನೆಗಳು ಕಾರ್ಯಕರ್ತರಿಗೆ ಅಧ್ಯಯನ ಶಿಬಿರ ನಡೆಸಿ ನಾಡಿನ ಹೆಸರಾಂತ ಸಾಹಿತಿಗಳು, ಹೋರಾಟಗಾರರನ್ನು ಕಾರ್ಯಕ್ರಮಗಳಿಗೆ ಕರೆಯಿಸಿ ನಾಡು ನುಡಿಯ ಬಗ್ಗೆ, ಜನಪರ ಹೋರಾಟಗಳ ಬಗ್ಗೆ ಅರಿವು ಮೂಡಿಸಬೇಕೆಂದು ಹೇಳಿದರು.

ಕಾನೂನು ಸಲಹೆಗಾರರಾದ ಭಾಗ್ಯ ಲಕ್ಷ್ಮೀ, ಡಾ.ಮುರುಳಿ ಮೋಹನ್, ಕರವೇ ಸ್ವಾಭಿಮಾನಿ ಸೇನೆಯ ರಾಜ್ಯಾಧ್ಯಕ್ಷ ನಿಂಗರಾಜ ಗೌಡ, ಹೆಚ್. ಬಸವರಾಜಪ್ಪ ಗೌಡ, ಕಾರ್ಯಾಧ್ಯಕ್ಷೆ ಸುವರ್ಣಮ್ಮ, ಎ.ಎನ್. ಬಸವರಾಜ್, ಸುಜ್ಞಾನಮೂರ್ತಿ, ಬಿ.ಜಯಪ್ರಕಾಶ್, ನೀತಾ ನಂದೀಶ್, ರವಿಕುಮಾರ್, ಪಿ.ಕೆ.ಮಂಜುನಾಥ್, ಅಕ್ಬರ್ ಬಾಷಾ, ನಿಂಗರಾಜ್ ಜಾಧವ್, ಮಲ್ಲಿಕಾರ್ಜುನ, ದೇವೇಂದ್ರಪ್ಪ ಇದ್ದರು.

# ತೋಟಗಳಿಗೆ ರೋಗಭಾದೆ ಸೋಂಕದಂತೆ ಮುಂಜಾಗ್ರತಾ ಕ್ರಮವಹಿಸಿ: ಗೋವಿಂದಪ್ಪ

» **ಹೊಸದುರ್ಗ**

ರೈತರು ತೆಂಗಿನ ತೋಟಕ್ಕೆ ತಗುಲಿರವ ರೋಗಬಾಧೆ ಬಗ್ಗೆ ನಿರ್ಲಕ್ಷ್ಯ ವಹಿಸದೆ, ತಕ್ಷಣ ತೋಟಗಾರಿಕಾ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ತೆಂಗಿನ ತೋಟ ಉಳಿಸಿಕೊಳ್ಳಲು ಮುಂದಾಗಬೇಕು ಎಂದು ಶಾಸಕ ಬಿ.ಜಿ.ಗೋವಿಂದಪ್ಪ ರೈತರಿಗೆ ಮನವಿ ಮಾಡಿದರು.

ತಾಲ್ಲೂಕಿನ ಕೆಲ್ಲೋಡಿನ ಕನಕ ಗುರುಪೀಠದ ಆವರಣದಲ್ಲಿ ಕೃಷಿ ಇಲಾಖೆ ವತಿಯಿಂದ ಆಯೋಜಿಸಿದ್ದ ಜಿಲ್ಲಾಮಟ್ಟದ ಆಹಾರ ಮತ್ತು ಪೌಷ್ಟಿಕ ಭದ್ರತೆ ನ್ಯೂಟ್ರಿ ಸಿರಿಧಾನ್ಯ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ತೆಂಗಿನ ಮರಕ್ಕೆ ಆವರಿಸಿರುವ ರೋಗ ನಿಯಂತ್ರಣಕ್ಕೆ ತೋಟಗಾರಿಕಾ ಇಲಾಖೆಯ ಅಧಿಕಾರಿಗಳ ಜೊತೆ ರೈತರು ಸಹ ಸ್ವಯಂ ಪ್ರೇರಣೆಯಿಂದ ತೋಟ ರಕ್ಷಣೆ ಮಾಡಿಕೊಳ್ಳಬೇಕು.ಹೊಸದುರ್ಗ ರಾಜ್ಯದಲ್ಲಿ ಅತಿಹೆಚ್ಚು ಸುಮಾರು 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆಯುತ್ತಿರುವ ತಾಲೂಕಾಗಿದೆ ಎಂದರು.

ಜಂಟಿ ಕೃಷಿ ನಿರ್ದೇಶಕ ಡಾ. ಬಿ.ಮಂಜುನಾಥ ಮಾತನಾಡಿ,ಕರ್ನಾಟಕ ರಾಜ್ಯ ಸಿರಿಧಾನ್ಯಗಳ ಬೆಳೆಗಳಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದೆ. ವಿಶ್ವಸಂಸ್ಥೆಯು ಗೊತ್ತುಪಡಿಸಿದ 2023 ನೇ ವರ್ಷವನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂದು ಆಚರಿಸುವ ಪ್ರಯತ್ನದ ಭಾಗವಾಗಿ, ಜನರಲ್ಲಿ ಅದರ ಬಳಕೆಯನ್ನು ಹೆಚ್ಚಿಸುವ ಮೂಲಕ ಬೆಳೆಯನ್ನು ಉತ್ತೇಜಿಸಲು ಸರ್ಕಾರ ಯೋಜಿಸುತ್ತಿದೆ. ಮಕ್ಕಳು ಮತ್ತು ಯುವಕರಲ್ಲಿ ಸಿರಿಧಾನ್ಯಗಳ ಬಳಕೆಯ ವಿಶೇಷ ಅರಿವು ಮೂಡಿಸುವುದು ಮತ್ತು ರೈತರಿಗೆ ಉತ್ತಮ ಆದಾಯವನ್ನು ಪಡೆಯಲು ಸಹಾಯ ಮಾಡುವುದು ಕೂಡ ಇದರ ಉದ್ದೇಶವಾಗಿದೆ



> ಸಿರಿಧಾನ್ಯಗಳು ಮಧುಮೇಹವನ್ನು ಹತೋಟಿಯಲ್ಲಿಡಲಿವೆ. ಸಿರಿಧಾನ್ಯಗಳಲ್ಲಿರುವ ನಾರಿನಾಂಶ ರಕ್ತದಲ್ಲಿರುವ ಕೊಲೆಸ್ಟ್ರಾಲ್‌ಅನ್ನು ಕಡಿಮೆಗೊಳಿಸುತ್ತದೆ. ಕ್ಯಾನ್ಸರ್‌ನ ವಿರುದ್ಧ ರಕ್ಷಣೆ ನೀಡುತ್ತದೆ. ಎಲುಬುಗಳು ಗಟ್ಟಿಯಾಗುವಿಕೆಗೆ ಮತ್ತು ಬೆಳವಣಿಗೆಗೆ ಸಹಾಯ ಮಾಡುತ್ತದೆ. ಮಲಬದ್ಧತೆ ತಡೆಗಟ್ಟುತ್ತದೆ. ಮೂತ್ರಕೋಶದ ಕಲ್ಲುಗಳ ತಡೆಗೆ ಸಹಕಾರಿಯಾಗುತ್ತದೆ.
>
> » **ಶ್ರೀ ಈಶ್ವರನಂದಪುರಿ ಸ್ವಾಮೀಜಿ ಕನಕ ಗುರುಪೀಠ ಶಾಖಾಮಠ, ಹೊಸದುರ್ಗ**

ಎಂದು ಹೇಳಿದರು.

ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿ ಯೋಗೀಶ್ ಅಪ್ಪಾಜಯ್ಯ,ಚಿತ್ರದುರ್ಗ ಉಪಕೃಷಿ ನಿರ್ದೇಶಕ ಡಾ.ಕೆ.ಎಸ್.ಶಿವಕುಮಾರ್, ನಬಾರ್ಡ್ ಅಧಿಕಾರಿ ಕವಿತಾ. ಡಾ.ರವಿ, ಡಾ.ನಿಂಗಪ್ಪ, ತಾಲೂಕು ಸಹಾಯಕ ಕೃಷಿ ನಿರ್ದೇಶಕ ಈಶ, ಕೃಷಿಕ ಸಮಾಜದ ಅಧ್ಯಕ್ಷ ಚಂದ್ರಶೇಖರ,ಮುಖಂಡರಾದ ಅರುಣ್ ಗೋವಿಂದಪ್ಪ, ಕೆ.ಟಿ.ಮಂಜುನಾಥ, ಕನಕ ನೌಕರರ ಸಂಘದ ಅಧ್ಯಕ್ಷ ಶಾಂತಕುಮಾರ್, ಗ್ರಾಮ ಪಂಚಾಯಿತಿಯ ಅಧ್ಯಕ್ಷ ಉಷಾ, ಕೃಷಿ ವಿಜ್ಞಾನಿ ಓಂಕಾರಪ್ಪ, ರೈತ ಸಂಘದ ಮಹೇಶ್ವರಪ್ಪ, ಬೋರೇಶ್, ಆಗ್ರೋ ಶಿವಣ್ಣ ಮತ್ತು ರಾಗಿ ಶಿವಮೂರ್ತಿ ಸೇರಿದಂತೆ ವಿವಿಧ ಮುಖಂಡರು ಹಾಗೂ ನೂರಾರು ರೈತರು ಪಾಲ್ಗೊಂಡಿದ್ದರು.

## ದೇವರ ಎತ್ತುಗಳಿಗೆ ಮೇವು ಪೂರೈಸ ಜಿಲ್ಲಾಡಳಿತದ ವಿರುದ್ಧ ಜಪಾನಂದಸ್ವಾಮೀಜಿ ಆಕ್ರೋಶ



» **ಚಳ್ಳಕೆರೆ**

ಕಳೆದ ಹಲವಾರು ತಿಂಗಳುಗಳಿಂದ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ದೇವರರಾಸುಗಳಿಗೆ ಮೇವಿಲ್ಲದೆ ಅವುಗಳು ಉಪವಾಸದಿಂದ ಪರಿತಪಿಸಿ, ಸಾಯುವ ಸ್ಥಿತಿ ತಲುಪಿದ್ದವು. ಆದರೆ, ಅವುಗಳ ರಕ್ಷಣೆಗೆ ಬೆಂಗಳೂರಿನ ಇನ್ಫೋಸಿಸ್ ಸುಧಾಮೂರ್ತಿ ಪ್ರತಿಷ್ಠಾನದೊಂದಿಗೆ ಚರ್ಚಿಸಿ ಉಚಿತವಾಗಿ ಜಾನುವಾರುಗಳಿಗೆ ಮೇವು ನೀಡಲಾಗುತ್ತಿದೆ. ಆದರೆ, ಸರ್ಕಾರ ಮಾತ್ರ ಈ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದು ಬೇಸರ ಸಂಗತಿ ಎಂದು ಪಾವಗಡ ರಾಮಕೃಷ್ಣಾಶ್ರಮದ ಜಪಾನಂದಸ್ವಾಮೀಜಿ ತಿಳಿಸಿದರು. ಅವರು, ಗುರುವಾರ ಪ್ರವಾಸಿಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಕಳೆದ ನಾಲ್ಕು ತಿಂಗಳಿನಿಂದ ಜಿಲ್ಲಾಡಳಿತಕ್ಕೆ ದೇವರ ರಾಸುಗಳಿಗಾದರೂ ಉಚಿತ ಮೇವು ನೀಡಿ ಎಂದು ಒತ್ತಾಯ ಪಡಿಸಿದ್ದೇನೆ. ಕ್ಷೇತ್ರದ ಶಾಸಕರಿಗೂ ಮನವಿ ಮಾಡಿದ್ದೇನೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ನಾನು ಒಬ್ಬ ಸಾಧುವಾಗಿ ಬಿಕ್ಷೆ ಬೇಡಿ ದೇವರ ಎತ್ತುಗಳಿಗೆ ಮೇವು ಪೂರೈಸುತ್ತಿದ್ದೇನೆ. ಇನ್ನೂ ಮುಂದಾದರೂ ಸರ್ಕಾರ ಈ ಸಮಸ್ಯೆಯ ಗಂಭೀರತೆಯನ್ನು ಅರಿತು ಜಾನುವಾರುಗಳಿಗೆ ಉಚಿತವಾಗಿ ಮೇವು ವಿತರಿಸಲಿ ಎಂದು ಮನವಿ ಮಾಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ಚಳ್ಳಕೆರೆ, ಮೊಳಕಾಲ್ಮೂರು ದೇವರ ಎತ್ತುಗಳ ಕಿಲಾರಿಗಳು ಮಾತನಾಡಿ, ಸ್ವಾಮೀಜಿಯವರು ನಿರಂತರ ನಮ್ಮೊಂದಿಗೆ ಸಂಪರ್ಕವನ್ನಿಟ್ಟುಕೊಂಡು ಜಾನುವಾರುಗಳಿಗೆ ಅಗತ್ಯವಿರುವ ಮೇವು ಉಚಿತವಾಗಿ ನೀಡುತ್ತಾ ಬಂದಿದ್ದಾರೆ. ಪ್ರತಿತಿಂಗಳು ನಮ್ಮ ಜಾನುವಾರುಗಳಿಗೆ ಸಮರ್ಪಕವಾಗಿ ಮೇವು ವಿತರಣೆ ಮಾಡುತ್ತಿದ್ದಾರೆ. ಸರ್ಕಾರ ಗೋಶಾಲೆಯನ್ನು ಆರಂಭಿಸಿಲ್ಲ, ಜಾನುವಾರುಗಳ ರಕ್ಷಣೆಗೆ ಮುಂದಾಗದೇ ಇರುವುದು ನೋವಿನ ಸಂಗತಿ ಎಂದರು. ಈ ಸಂದರ್ಭದಲ್ಲಿ ಕಿಲಾರಿಗಳಾದ ಪಾಲಯ್ಯ, ಗಾದ್ರಿಪಾಲಯ್ಯ, ಸಿದ್ದೇಶ್, ಮಹೇಶ್‌ಕುಮಾರ್, ಬೋರಯ್ಯ, ಪರಮೇಶ್ವರಪ್ಪ, ಓಬಣ್ಣ ಮುಂತಾದವರು ಉಪಸ್ಥಿತರಿದ್ದರು.

ಪ್ರಮುಖ ಸುದ್ದಿ

# ವಿಜೃಂಭಣೆಯ ಕನಕದಾಸ ಜಯಂತಿ ಆಚರಣೆ

» **ಮೊದಲ ಪುಟದಿಂದ**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆ.ಸಿ.ವೀರೇಂದ್ರ ಪಪ್ಪಿ, ಸಾಮಾನ್ಯ ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದ ಕನಕದಾಸರು ಜನರ ಕವಿಗಳಾಗಿದ್ದಾರೆ. ಕನಕದಾಸರು ಕಲಿಯೂ ಹೌದು ಕವಿಯೂ ಹೌದು. ಸಮ ಸಮಾಜದ ಚಿಂತನೆಯ ಅವರ ಆಶಯಗಳನ್ನು ಎಲ್ಲರೂ ಪಾಲಿಸಬೇಕು. 1936ರಲ್ಲಿ ಸ್ಥಾಪನೆಯಾದ ಜಿಲ್ಲಾ ಕುರುಬ ಸಮಾಜ ಸಮಾಜಮುಖಿ ಕೆಲಸಗಳಿಗೆ ಹೆಸರುವಾಸಿಯಾಗಿದೆ. 1946ರಲ್ಲಿ ನಗರದಲ್ಲಿ ನಿರ್ಮಾಣವಾದ ನಗರದ ಕುರುಬ ವಿದ್ಯಾರ್ಥಿನಿಲಯದ ಶಿಥಿಲ ಕಟ್ಟಡ ನೆಲಸಮಗೊಳಿಸಿ, ಹೊಸ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಅಗತ್ಯ ಇರುವ ಅನುದಾನವನ್ನು ನೀಡುವಂತೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಕುರುಬ ಸಮುದಾಯ ಭವನ ನಿರ್ಮಾಣ, ಎಸ್.ಜೆ.ಎಂ. ಕಾಲೇಜು ಹಿಂಭಾಗದ ಧವಳಗಿರಿ ಬಡವಾಣೆ ವಸತಿ ಶಾಲೆ ನಿರ್ಮಾಣದ ಪ್ರಸ್ತಾವನೆಯನ್ನು ಸಹ ಸರ್ಕಾರಕ್ಕೆ ಕಳುಹಿಸಲಾಗಿದೆ. 5 ಎಕರೆ ಜಮೀನು ಮಂಜೂರು ಸೇರಿದಂತ



ಕುರುಬ ಸಮಾಜದ ಇತರೆ ಬೇಡಿಕೆಗಳನ್ನು ಸಹ ಆದ್ಯತೆ ಮೇರೆಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಆಶ್ವಾಸನೆ ನೀಡಿದರು.

ಸಾಧಕರಿಗೆ ಸನ್ಮಾನ: ಜಯಂತಿ ಅಂಗವಾಗಿ ಕುರುಬ ಸಮುದಾಯಕ್ಕೆ ಸೇರಿದ ತಾಲ್ಲೂಕು ಸಹಕಾರಿ ಸಂಘದ ಅಧ್ಯಕ್ಷ ಎಂ.ನಿಶಾನಿ ಜಯಣ್ಣ, ಸಮಾಜ ಸೇವಕ ಹಾಗೂ ಕೃಷಿಕ ಬಿ.ಹೆಚ್. ಹನುಮಂತಪ್ಪಗೌಡ, ಮಕ್ಕಳ ತಜ್ಞ ಡಾ.ದೇವರಾಜ್, ಬಿಬಿಎಸ್ ಹಾಗೂ ಎಂಡಿ ಪದವಿ ಪೂರೈಸಿದ ಶರತ್.ಪಿ.ಶ್ರೀನಿವಾಸ ಕೋರಿ, ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಕಾಂ.ನಲ್ಲಿ ಚಿನ್ನದ ಪದಕ ಪಡೆದ ಕುಮಾರಿ ಚೈತನ್ಯಾ ಸಿ.ಎಂ. ಅವರನ್ನು ಸನ್ಮಾನಿಸಲಾಯಿತು. ಇದರೊಂದಿಗೆ ಸಹೋದರ ಸಮುದಾಯಗಳ ಸಾಧಕರಾದ ನಗರ ಸಭೆ ಸದಸ್ಯ ದೀಪು, ಸಮಾಜ ಸೇವಕರಾದ ದುರಗೇಶಪ್ಪ, ಮಹಮದ್ ನೂರುಲ್ಲಾ, ಮಲ್ಲಣ್ಣ, ಪರಿಸರ ಪ್ರೇಮಿ ಸಿದ್ದೇಶ್ ಜೋಗಿ ಅವರನ್ನು ಕೂಡ ಸನ್ಮಾನಿಸಲಾಯಿತು.

**ಭವ್ಯ ಮೆರವಣಿಗೆ:** ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ನಗರದ ಕನಕದಾಸ ವೃತ್ತದಲ್ಲಿ ಇರುವ ಕನಕದಾಸರ ಪುತ್ಥಳಿಗೆ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಇದೇ ವೇಳೆ ಕನಕವೃತ್ತದಿಂದ ತರಾಸು ರಂಗ ಮಂದಿರದವರೆಗೆ ಕನಕದಾಸರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಕನಕದಾಸ, ಅಂಬೇಡ್ಕರ್, ಸಂಗೊಳ್ಳಿ ರಾಯಣ್ಣ, ಒನಕೆ ಓಬವ್ವ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಸೇರಿದಂತೆ ಹಲವು ಮಹನೀಯರ ವೇಷತೊಟ್ಟ ಮಕ್ಕಳು ಮೆರವಣಿಗೆಯ ಆಕರ್ಷಣೆ ಎನಿಸಿದರು.

ಕಾರ್ಯಕ್ರಮದಲ್ಲಿ ಜಿ.ಪಂ.ಸಿಇಓ ಎಸ್.ಜೆ.ಸೋಮಶೇಖರ್, ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ,ಉಪವಿಭಾಧಿಕಾರಿ ಆರ್.ಕಾರ್ತಿಕ್, ನಗರಸಭೆ ಆಯುಕ್ತೆ ಎಂ.ರೇಣುಕಾ, ನಗರಸಭಾ ಸದಸ್ಯರಾದ ಮೀನಾಕ್ಷಿ, ಪೂಜಾ ಮಂಜುನಾಥ್, ಜಿಲ್ಲಾ ಕುರುಬ ಸಂಘದ ಅಧ್ಯಕ್ಷ ಎಸ್.ಶ್ರೀರಾಮ್, ಕಾರ್ಯದರ್ಶಿ ಬಿ.ಟಿ.ಜಗದೀಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಸ್. ಮಲ್ಲಿಕಾರ್ಜುನ ಸೇರದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸ್ವಾಗತಿಸಿದರು. ಜಿಲ್ಲಾ ಕುರುಬ ಸಂಘದ ಕಾರ್ಯಾಧ್ಯಕ್ಷ, ಆರ್.ಮಂಜುನಾಥ್ ಪ್ರಸ್ತಾವಿಕ ನುಡಿಗಳನ್ನಾಡಿದರು.

## ಫಾಸ್ಟ್ ನ್ಯೂಸ್

### ನಗರಂಗೆರೆ ಗ್ರಾಪಂನಿಂದ ಕನಕಜಯಂತಿ



» **ಚಳ್ಳಕೆರೆ**

ತಮ್ಮ ಭಕ್ತಿಯ ಪಥದ ಮೂಲಕವೇ ದೇವರನ್ನೇ ತಮ್ಮತ್ತ ತಿರುಗುವಂತೆ ಮಾಡಿದ ಭಕ್ತಕನಕದಾಸರ ಆದರ್ಶ ನಮ್ಮೆಲ್ಲರಿಗೂ ಶ್ರೀರಕ್ಷೆ. ಮಾನವರಲ್ಲಿ ಜಾತಿಬೇಧಬಾವವಿಲ್ಲದೆ ಸಮಾನತೆಯ ಬದುಕು ಸಾರಿದವರು ಕನಕದಾಸರು ಎಂದು ನಗರಂಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಾಗವೇಣಿ ತಿಳಿಸಿದರು. ಅವರು, ಗುರುವಾರ ಗ್ರಾಮ ಪಂಚಾಯಿತಿ ಕಾರ್ಯಾಲಯದ ಆವರಣದಲ್ಲಿ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಇಂತಹ ಭಕ್ತಶ್ರೇಷ್ಠರ ಕಾರ್ಯಕ್ರಮ ನಮ್ಮೆಲ್ಲರಿಗೂ ಸ್ಪೂರ್ತಿಯಾಗಲಿ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂ.ರಾಮಚಂದ್ರಪ್ಪ, ಪ್ರಸ್ತುತ ರಾಜ್ಯ ಸರ್ಕಾರ 536ನೇ ಕನಕಜಯಂತಿ ಆಚರಣೆ ಮೂಲಕ ಕನಕದಾಸರು ಈ ನಾಡಿಗೆ ನೀಡಿದ ಕೊಡುಗೆಯ ಬಗ್ಗೆ ಜನಸಾಮಾನ್ಯರು ಅರಿಯುವಂತೆ ಮಾಡಿದೆ. ಸಾಮಾನ್ಯವಾಗಿ ಸಮಾಜವನ್ನು ತಿದ್ದುವಲ್ಲಿ ಹಲವಾರು ಮಹಾನ್ ಸಂತರು ತಮ್ಮದೇಯಾದ ಕೀರ್ತನೆಗಳ ಮೂಲಕ ಪರಿವರ್ತನೆಯನ್ನು ಹಾಡಿದ್ದಾರೆ. ಇಂತಹ ಭಕ್ತಶ್ರಷ್ಠರಲ್ಲಿ ಕನಕದಾಸರು ಒಬ್ಬರು ಎಂದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಓಬಯ್ಯ, ಸದಸ್ಯರಾದ ಅಂಗಡಿರಮೇಶ್, ಎನ್. ಮಂಜುನಾಥ, ದ್ಯಾಮಲಾಂಭ, ತಿಪ್ಪೇಸ್ವಾಮಿ, ಕಾರ್ಯದರ್ಶಿ ಎಂ.ಮಂಜುಳಾ, ಗ್ರಂಥಪಾಲಕ ನಿರಂಜನಮೂರ್ತಿ, ಗ್ರಾಮದ ಮುಖಂಡರಾದ ಕರಿಯಣ್ಣ, ತಿಪ್ಪೇಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.


### ಭಕ್ತಿ ಪಥ ಸಾಮಾನ್ಯರಿಗೆ ಉಣಬಡಿಸಿದ ಮಹಾನ್ ಸಂತ ಕನಕದಾಸರು



» **ಚಳ್ಳಕೆರೆ**

ಸಮಾಜದಲ್ಲಿ ನಿಂತರ ಭಕ್ತಿಯ ಪಥವನ್ನು ಮೂಡಿಸುವಲ್ಲಿ ಈ ನಾಡಿನ ಅನೇಕ ಸಂತರು ತಮ್ಮದೇಯಾದ ಕೊಡುಗೆ ನೀಡುತ್ತಾ ಬಂದಿದ್ದಾರೆ. ಕೀರ್ತನೆ, ವಚನಗಳ ಮೂಲಕ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯ ಮೂಡಿಸಲು ನೆರವಾಗಿದ್ದಾರೆ. ಅಂತಹ ಮಹಾನ್ ಕೀರ್ತನಕಾರರಲ್ಲಿ ಭಕ್ತಕನಕದಾಸರು ಶ್ರೇಷ್ಠರು ಎಂದು ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ಅವರು, ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಮ್ಮಿಕೊಂಡಿದ್ದ ಕನಕದಾಸರ 536ನೇ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ರಾಜ್ಯ ಸರ್ಕಾರ ಕಳೆದ ಹಲವಾರು ವರ್ಷಗಳಿಂದ ಇಂತಹ ದಾರ್ಶನಿಕರ ಕೊಡುಗೆಯನ್ನು ಸಾರ್ವಜನಿಕವಾಗಿ ನೆನಪಿಸಿಕೊಳ್ಳುವ ಕಾರ್ಯ ಮಾಡುತ್ತಿದ್ದು ಅತ್ಯಂತ ಸಂತೋಷದಾಯ ವಿಚಾರ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ತಹಶೀಲ್ದಾರ್ ರೇಹಾನ್‌ಪಾಷ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸ್ವಾತಂತ್ರ್ಯ ಯೋಧರು, ಕೀರ್ತನಕಾರರು, ಸ್ವಾಮೀಜಿಗಳು, ನಾಡಿನ ಸಮರ್ಪಣೆ ಮಾಡಿದ ಅನೇಕ ಮಹಾನೀಯರ ವಿಚಾರಧಾರೆಗಳನ್ನು ಎಲ್ಲರೊಂದಿಗೂ ಸಮಾನಾಗಿ ಹಂಚಿಕೊಳ್ಳುವ ಕಾರ್ಯವನ್ನು ಈ ಮೂಲಕ ಮಾಡುತ್ತಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯವೆಂದರು. ಕಾರ್ಯಕ್ರಮದಲ್ಲಿ ರೇವಣಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಆರ್.ಮಲ್ಲೇಶಪ್ಪ, ಇಒ ಶಶಿಧರ, ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಜೆ.ರಾಘವೇಂದ್ರ, ಪೌರಾಯುಕ್ತ ಸಿ.ಚಂದ್ರಪ್ಪ, ಸಮಾಜ ಕಲ್ಯಾಧಿಕಾರಿ ಮಂಜುನಾಥ, ಬಿಸಿಎಂ ಅಧಿಕಾರಿ ದಿವಾಕರ್, ಸಿಡಿಪಿಒ ಹರಿಪ್ರಸಾದ್, ಎಸ್ಟಿ ಕಲ್ಯಾಣಾಧಿಕಾರಿ ಶಿವರಾಜು, ಪಶು ಅಧಿಕಾರಿ ರೇವಣ್ಣ, ನಗರಸಭಾ ಸದಸ್ಯರಾದ ಕೆ.ವೀರಭದ್ರಪ್ಪ, ರಮೇಶ್‌ಗೌಡ, ಪರಸಪ್ಪ, ಜಗದೀಶ್, ಚೌಳೂರು ಬಸವರಾಜು, ಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.



**ಚಳ್ಳಕೆರೆ ನಗರದ ವಾಲ್ಮೀಕಿ ವೃತ್ತದಲ್ಲಿ ಬೀಡಾ ಅಂಗಡಿ ಮಾಲೀಕ, ಕನ್ನಡಾಭಿಮಾನಿ ರಂಗನಾಥ ಕನ್ನಡ ರಾಜ್ಯೋತ್ಸವವನ್ನು ತನ್ನ ಅಂಗಡಿಗೆ ಕನ್ನಡದ ಬಾವುಟ ಬಣ್ಣ ಹೂ ಹಾಗೂ ಬಟ್ಟೆಯಿಂದ ಅಲಂಕರಿಸಿ ರಾಜ್ಯೋತ್ಸವ ಆಚರಿಸಿದರು.**

---

**ಫ್ರುಟ್ ತಂತ್ರಾಂಶದಲ್ಲಿ ಅಕ್ರಮವಾಗಿ ಬೆಳೆ ತಿದ್ದುಪಡಿ ಮಾಡುವವರ ವಿರುದ್ಧ ಕಠಿಣ ಕ್ರಮ– ದಿವ್ಯಪ್ರಭು ಜಿ.ಆರ್.ಜೆ.**

# ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಗೆ ಶೀಘ್ರ ಪ್ರಾರಂಭ

» **ಚಿತ್ರದುರ್ಗ**

ಜಿಲ್ಲೆಯಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳೆದ ರಾಗಿಯನ್ನು ಖರೀದಿ ಮಾಡಲು ರೈತರ ನೊಂದಣಿ ಪ್ರಕ್ರಿಯೆಯನ್ನು ಶೀಘ್ರ ಪ್ರಾರಂಭಿಸಲಾಗುವುದು, ಫ್ರುಟ್ಸ್ ತಂತ್ರಾಂಶದಲ್ಲಿ ರೈತರ ಬೆಳೆ ನಮೂದನ್ನು ಅಕ್ರಮವಾಗಿ ತಿದ್ದುಪಡಿ ಮಾಡುವ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ. ಹೇಳಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಪ್ರಸ್ತಕ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ರಾಗಿ ಖರೀದಿಸಲು, ಖರೀದಿ ಕೇಂದ್ರತೆರೆಯುವ ಬಗ್ಗೆ ಪೂರ್ವಸಿದ್ಧತೆಗಾಗಿ ಹಮ್ಮಿಕೊಂಡಿದ್ದ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರ ಪ್ರಸಕ್ತ ಸಾಲಿಗೆ ರಾಗಿ ಬೆಳೆಗೆ ಪ್ರತಿ ಕ್ವಿಂಟಾಲ್‌ಗೆ 3846 ರೂ. ಬೆಂಬಲ ಬೆಲೆ ಘೋಷಿಸಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಂದಗರಿಷ್ಟ20ಕ್ವಿಂ.ರಾಗಿ ಖರೀದಿಸಲು ಅವಕಾಶವಿದೆ. ಬೆಂಬಲ ಬೆಲೆಯಡಿ ರಾಗಿ ಖರೀದಿಗಾಗಿ ರೈತರ ನೊಂದಣಿ ಕಾರ್ಯ ಶೀಘ್ರ ಆರಂಭಿಸಲಾಗುವುದು. ಕಳೆದ ವರ್ಷ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಸಂದರ್ಭದಲ್ಲಿ ಉಂಟಾದ ಗೊಂದಲ, ಅಕ್ರಮ ಹಾಗೂ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಈ ಬಾರಿ ಅಂತಹ ತಪ್ಪುಗಳು ಹಾಗೂ ಗೊಂದಲ ಮರುಕಳಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ರೈತರ ನೊಂದಣಿ ಸಂದರ್ಭದಲ್ಲಿಯೇ ಅವರಿಗೆ ರಾಗಿ ಬೆಳೆಯನ್ನು ಎಪಿಎಂಸಿ ಗೆ ತರುವ ದಿನಾಂಕ ಹಾಗೂ ಸಮಯವನ್ನು ನಮೂದಿಸಿ ಟೋಕನ್ ನೀಡುವ ವ್ಯವಸ್ಥೆ ತರಲಾಗುವುದು.

ಈ ಬಾರಿ ಹೊಸದುರ್ಗದಲ್ಲಿ 02, ಶ್ರೀರಾಂಪುರದಲ್ಲಿ 02, ಚಿತ್ರದುರ್ಗ–01 ಹಾಗೂ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರಿನಲ್ಲಿ 01 ಸೇರಿದಂತೆ ಒಟ್ಟು 06 ಖರೀದಿ ಕೇಂದ್ರಗಳನ್ನು ಎಪಿಎಂಸಿ ಗಳಲ್ಲಿ ಪ್ರಾರಂಭಿಸಲಾಗುವುದು. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವನ್ನು ಜಿಲ್ಲೆಗೆ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಏಜೆನ್ಸಿಯಾಗಿ ಸರ್ಕಾರ ನಿಗದಿಪಡಿಸಿದೆ ಎಂದರು.

**ಫ್ರುಟ್ಸ್ ನಲ್ಲಿ ಬೆಳೆ ತಿದ್ದುಪಡಿ ಮಾಡಿದಲ್ಲಿ ಎಫ್‌ಐಆರ್** : ಫ್ರುಟ್ಸ್ ತಂತ್ರಾಂಶದ ಬೆಳೆ ಮಾಹಿತಿ ಆಧಾರದ ಮೇಲೆ ರಾಗಿ ಖರೀದಿಸಲಾಗುವುದು. ಈ ಹಿನ್ನಲೆಯಲ್ಲಿ ಕೃಷಿ ಇಲಾಖೆ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಫ್ರುಟ್ಸ್ ತಂತ್ರಾಂಶದಲ್ಲಿ ವಿವರ ನಮೂದಿಗೆ ಅವಕಾಶವಿದೆ. ಕಳೆದ ಬಾರಿ ರಾಗಿ ಬೆಳೆಯದಿರುವವರಿಗೂ ಫ್ರುಟ್ಸ್ ತಂತ್ರಾಂಶದಲ್ಲಿ ಬೆಳೆ ಬದಲಾವಣೆ ಮಾಡಿರುವುದು ಕಂಡುಬಂದಿದ್ದು, ಹೀಗಾಗಿ ಈ ಬಾರಿ ಬೆಳೆ ಸಮೀಕ್ಷೆ ಸಂದರ್ಭದಲ್ಲಿ ದಾಖಲಿಸಿಕೊಂಡಿರುವ ದತ್ತಾಂಶವನ್ನು ಪರಿಗಣಿಸಿಕೊಂಡು, ಬೆಳೆ ವಿವರ ಪರಿಶೀಲಿಸಲಾಗುವುದು. ಮನಬಂದಂತೆ ಫ್ರುಟ್ಸ್ ತಂತ್ರಾಂಶದಲ್ಲಿ ಯಾವುದೇ ಇಲಾಖೆಯ ಅಧಿಕಾರಿ, ಸಿಬ್ಬಂದಿ ಅಕ್ರಮವಾಗಿ ಬೆಳೆ ತಿದ್ದುಪಡಿ ಮಾಡಿರುವುದು ಕಂಡುಬಂದಲ್ಲಿ, ಅಂತಹ ಪ್ರಕರಣಗಳಲ್ಲಿ ಯಾರ ಲಾಗಿನ್ ನಿಂದ ಈ ತಿದ್ದುಪಡಿ ಆಗಿದೆ ಎಂಬುದನ್ನು ಗುರುತಿಸಿ, ಅಂತಹ ಅಧಿಕಾರಿ, ಸಿಬ್ಬಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿ ಅಮಾನತುಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

**484 ರೈತರ ಬಾಕಿ ಮೊತ್ತ ಶೀಘ್ರ ಪಾವತಿ** : ಕಳೆದ ಬಾರಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಸಿದ ರೈತರ ಪೈಕಿ ಈಗಾಗಲೆ ಮೊತ್ತ ಪಾವತಿಯಾಗಿದೆ, ಆದರೆ ವಿವಿಧ ಸಮಸ್ಯೆಯ ಕಾರಣ ಸುಮಾರು 484 ಕ್ಕೂ ಹೆಚ್ಚು ರೈತರಿಗೆ ಸುಮಾರು 1.28 ಕೋಟಿ ರೂ. ಹಣ ಪಾವತಿ ಬಾಕಿ ಇದ್ದು, ಈ ಬಗ್ಗೆ ಸಮಸ್ಯೆಯನ್ನು ಪರಿಹರಿಸಲಾಗಿದ್ದು, ಒಂದು ವಾರದ ಒಳಗಾಗಿ 484 ರೈತರ ಬಾಕಿ ಮೊತ್ತ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಪಾವತಿಯಾಗಲಿದೆ ಎಂದರು.

**ಖರೀದಿ ಕೇಂದ್ರದಲ್ಲಿ ಮಾಹಿತಿ ಫಲಕ ಅಳವಡಿಸಿ** : ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಸುವ ಎಪಿಎಂಸಿ ಆವರಣದಲ್ಲಿನ ಖರೀದಿ ಕೇಂದ್ರಗಳ ಬಳಿ, ರೈತರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರವನ್ನು ಹೊಂದಿರುವ ಮಾಹಿತಿ ಫಲಕವನ್ನು ಅಳವಡಿಸಬೇಕು, ಖರೀದಿ ಕೇಂದ್ರಕ್ಕೆ ಆಗಮಿಸುವ ರೈತರಿಗೆ ಸೂಕ್ತ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ರಾತ್ರಿ ಸಮಯದಲ್ಲಿಯೂ ತೊಂದರೆಯಾಗದರೀತಿ ವಿದ್ಯುತ್‌ಲೈಟಿಂಗ್ ವ್ಯವಸ್ಥೆ ಮಾಡಬೇಕು. ಅಕ್ರಮವಾಗಿ ಎಪಿಎಂಸಿ ಆವರಣದಲ್ಲಿ ಹಮಾಲರು ರೈತರಿಂದ ಹಣ ವಸೂಲಿ ಮಾಡದಂತೆ ನಿಗಾ ವಹಿಸಬೇಕು, ದೂರು ಬಂದಲ್ಲಿ ಕೂಡಲೆ ಸೂಕ್ತ ಕ್ರಮ ಜರುಗಿಸಬೇಕು. ರಾಗಿ ಗುಣಮಟ್ಟ ಪರೀಕ್ಷೆಗೆ ಪ್ರತಿ ಕೇಂದ್ರಕ್ಕೆ ಅರ್ಹ ಗ್ರೇಡರ್‌ಗಳನ್ನು ನೇಮಿಸಬೇಕು, ಕಾನೂನು ಮಾಪನ ಇಲಾಖೆಯವರು ವೇಬ್ರಿಡ್ಜ್‌ಗಳನ್ನು ಪರಿಶೀಲಿಸಿ, ಸರಿಯಿರುವ ಬಗ್ಗೆ ದೃಢೀಕರಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

**18,285 ಟನ್ ರಾಗಿ ಉತ್ಪಾದನೆ** : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಮಧುಸೂಧನ್ ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಬಾರಿ ಉತ್ತಮ ಮಳೆಯಾದ ಕಾರಣ 74,135 ಟನ್ ರಾಗಿ ಉತ್ಪಾದನೆಯಾಗಿತ್ತು, ಹೊಸದುರ್ಗ ತಾಲ್ಲೂಕು ಒಂದರಲ್ಲೇ 47,540 ಟನ್ ರಾಗಿ ಉತ್ಪಾದನೆಯಾಗಿತ್ತು. ಅಲ್ಲದೆ ಬೆಂಬಲ ಬೆಲೆ ಯೋಜನೆಯಡಿ ಕಳೆದ ವರ್ಷ 2.17 ಲಕ್ಷ ಕ್ವಿಂ. ರಾಗಿ ಖರೀದಿಸಲಾಗಿತ್ತು. ಆದರೆ ಈ ಬಾರಿ ಮಳೆಯ ಕೊರತೆಯಿಂದಾಗಿ ಕೇವಲ 18,285 ಟನ್ ರಾಗಿ ಉತ್ಪಾದನೆಯಾಗಿರುವ ನಿರೀಕ್ಷೆ ಇದೆ. ಪ್ರಸಕ್ತ ಸಾಲಿಗೆ ರಾಗಿ ಬೆಳೆಗೆ ಪ್ರತಿ ಕ್ವಿಂಟಾಲ್‌ಗೆ 3846 ರೂ. ಬೆಂಬಲ ಬೆಲೆ ಘೋಷಿಸಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಗರಿಷ್ಟ 20 ಕ್ವಿಂ. ರಾಗಿ ಖರೀದಿಸಲು ಅವಕಾಶವಿದೆ. ಬೆಂಬಲ ಬೆಲೆಯಡಿ ರಾಗಿ ಖರೀದಿಗಾಗಿ ರೈತರ ನೊಂದಣಿ ಕಾರ್ಯ ಶೀಘ್ರ ಆರಂಭಿಸಲಾಗುವುದು. ಕಳೆದ ಬಾರಿ 04 ಖರೀದಿ ಕೇಂದ್ರಗಳನ್ನು ತೆರೆಯಲಾಗಿತ್ತು. ರಾಗಿ ಆವಕ ಹೆಚ್ಚಾದ ಕಾರಣ ಖರೀದಿ ಕೇಂದ್ರಗಳಲ್ಲಿ ಗೊಂದಲ ಹಾಗೂ ಜನಜಂಗುಳಿಗೆ ಕಾರಣವಾಗಿತ್ತು. ಈ ಬಾರಿ ಇಂತಹ ಸಮಸ್ಯೆಗಳಿಗೆ ಕಾರಣವಾಗದಂತೆ ಖರೀದಿ ಕೇಂದ್ರಗಳ ಸಂಖ್ಯೆಯನ್ನು 04 ರಿಂದ 06 ಕ್ಕೆ ಹೆಚ್ಚಿಸಲಾಗಿದೆ. ಈ ಬಾರಿ ಬಯೋಮೆಟ್ರಿಕ್ ಆಧಾರದಲ್ಲಿ ರೈತರ ನೊಂದಣಿ ಮಾಡುವುದರಿಂದ ಅದಕ್ಕೆ ತಕ್ಕಂತೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಶೀಘ್ರವೇ ರೈತರ ನೊಂದಣಿಯನ್ನು ಪ್ರಾರಂಭಿಸಲಾಗುವುದು ಎಂದರು.

**ರೈತ ಮುಖಂಡರ ಅಹವಾಲು** : ಜಿಲ್ಲಾ ಕಾರ್ಯಪಡೆ ಸಮಿತಿ ಸಭೆ ಆರಂಭಕ್ಕೂ ಮುನ್ನ,ರೈತಮುಖಂಡರಾದರಘು,ಸತೀಶ್, ವೇದಮೂರ್ತಿ ಅವರು ಜಿಲ್ಲಾಧಿಕಾರಿಗಳಿಗೆ ಅಹವಾಲು ಸಲ್ಲಿಸಿ, ಕಳೆದ ವರ್ಷ ರಾಗಿ ಮಾರಾಟ ಮಾಡಿದ 484 ರೈತರಿಗೆ ಹಣ ಪಾವತಿ ಬಾಕಿ ಇದೆ, ಕೂಡಲೆ ಈ ಎಲ್ಲ ರೈತರಿಗೆ ಹಣ ಪಾವತಿಯಾಗಬೇಕು. ಕಳೆದ ಬಾರಿ ಅಕ್ರಮವಾಗಿ ರೈತರಲ್ಲದವರು, ರಾಗಿ ಬೆಳೆಯದವರೂ ಕೂಡ ಬೆಂಬಲ ಬೆಲೆಯಲ್ಲಿ ರಾಗಿ ಮಾರಾಟ ಮಾಡಿದ್ದರು, ಇದರಿಂದಾಗಿ ನಿಜವಾದ ರೈತರಿಗೆ ಅನ್ಯಾಯವಾಗಿತ್ತು, ಈ ಬಾರಿ ಇಂತಹ ಪ್ರಮಾದಕ್ಕೆ ಅವಕಾಶ ಮಾಡಿಕೊಡಬಾರದು. ಕಳೆದ ಬಾರಿ ಸಮರ್ಪಕವಾಗಿ ಗುಣಮಟ್ಟ ಪರಿಶೀಲಿಸದೆ, ಧೂಳು, ಕಸದಿಂದ ಕೂಡಿದ ರಾಗಿಯನ್ನು ಕೂಡ ಖರೀದಿಸಲಾಗಿತ್ತು, ಈ ರೀತಿ ಖರೀದಿಸಿದ ರಾಗಿ ಪಡಿತರ ವ್ಯವಸ್ಥೆ ಮೂಲಕ ಪುನಃ ಜನರಿಗೇ ತಲುಪುವುದರಿಂದ, ಕಳಪೆ ಗುಣಮಟ್ಟದ ರಾಗಿಯನ್ನು ಜನರಿಗೆ ಸರ್ಕಾರವೇ ಪೂರೈಸಿದಂತೆ ಆಗುತ್ತದೆ. ಹೀಗಾಗಿ ಗುಣಮಟ್ಟವನ್ನು ಸರಿಯಾಗಿ ಪರಿಶೀಲಿಸಿಯೇ ಖರೀದಿಸುವಂತೆ ಗ್ರೇಡರ್ಸ್ ಹಾಗೂ ಅಧಿಕಾರಿಗಳಿಗೆ ಸೂಚನೆ ನೀಡಬೇಕು, ರೈತರ ನೊಂದಣಿ ಹಾಗೂ ಖರೀದಿ ಸಂದರ್ಭದಲ್ಲಿ ರೈತರು ಹಗಲು ರಾತ್ರಿ ನಿಂತು ಕಾಯುವ ಸ್ಥಿತಿ ಬರಬಾರದು ಎಂದು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ರೈತರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಲು ಬಿಡುವುದಿಲ್ಲ,484ರೈತರಬಾಕಿಮೊತ್ತಒಂದು ವಾರದ ಒಳಗಾಗಿ ಪಾವತಿಯಾಗಲಿದೆ, ಈ ಬಾರಿ ಖರೀದಿ ಕೇಂದ್ರಗಳಲ್ಲಿ ರೈತರಿಗೆ ಗೊಂದಲವಾಗದಂತೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು, ಗುಣಮಟ್ಟದ ಖರೀದಿಗೆ ಸೂಕ್ತ ಎಚ್ಚರಿಕೆ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ ಮಾತನಾಡಿ, ರಾಗಿ ಖರೀದಿ ಕೇಂದ್ರದ ಸುತ್ತಲೂ ಪೊಲೀಸ್ ಸಿಬ್ಬಂದಿ ಗಸ್ತು ತಿರುಗಲು ವ್ಯವಸ್ಥೆ ಮಾಡಲಾಗುವುದು. ಏನಾದರೂ ಸಮಸ್ಯೆ ಕಂಡುಬಂದಲ್ಲಿ 112 ಗೆ ಕರೆ ಮಾಡಿದಲ್ಲಿ ನಮ್ಮ ಪೊಲೀಸರು ತ್ವರಿತವಾಗಿ ಸ್ಪಂದಿಸುವರು ಎಂದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಹಾಯಕ ನಿರ್ದೇಶಕ ಎಸ್. ಕೆ.ಮಲ್ಲಿಕಾರ್ಜುನ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರವೀಣ್ ಚೌಧರಿ, ಎಪಿಎಂಸಿ ಸಹಾಯಕ ಕಾರ್ಯದರ್ಶಿ ವಾಣಿಶ್ರೀ, ಕೃಷಿ ಉತ್ಪನ್ನ ಮಾರುಕಟ್ಟೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

---

## ಮಾನವೀಯತೆಗೆ ಬೆಳಕು ಪಸರಿಸಿದ ದಾರ್ಶನಿಕರು

» **ಹೊಸದುರ್ಗ**

ಜಾತಿ ವ್ಯವಸ್ಥೆಯ ವಿರುದ್ದ ಹೋರಾಡಿ ಸಮಾನತೆಯ ತತ್ವ ಸಾರಿದ ಕನಕದಾಸರು ಸಮಾಜದ ಹಲವು ದೋಷ, ಲೋಪಗಳನ್ನು ನಿವಾರಿಸಿ ಮಾನವೀಯತೆಗೆ ಮಹಾಬೆಳಕು ಪಸರಿಸಿದ ದಾರ್ಶನಿಕರು ಎಂದು ಪುರಸಭಾ ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ.ತಿಳಿಸಿದರು.



ಪಟ್ಟಣದ ಪುರಸಭೆಯಲ್ಲಿ ಗುರುವಾರ ಆಯೋಜಿಸಲಾಗಿದ್ದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಬಾಗವಹಿಸಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.800 ವರ್ಷಗಳ ಹಿಂದೆ ಬಸವಣ್ಣನವರೂ ಇದೇ ಕೆಲಸ ಮಾಡಿದ್ದಾರೆ 500 ವರ್ಷಗಳ ಹಿಂದೆ ಕನಕದಾಸರು ಇದೇ ಕೆಲಸವನ್ನ ಮಾಡಿದ್ದಾರೆ ಸುಮಾರು 850 ವರ್ಷಗಳ ಹಿಂದೆ ಬಸವಾದಿ ಶರಣರು ಜಾತಿ ವ್ಯವಸ್ದೆಯನ್ನ ಹೋಗಲಾಡಿಸುವ ನಿಟ್ಟಿನಲ್ಲಿ ಎಲ್ಲಾ ಜಾತಿಯನ್ನೂ ಒಗ್ಗೂಡಿಸಿ ಕಾಯಕವೇ ಕೈಲಾಸ ಎಂಬ ವ್ಯಾಕ್ಯಹೇಳುವುದರ ಮೂಲಕ ಸಮಾಜವನ್ನ ತಿದ್ದುವ ಕೆಲಸ ಮಾಡಿದ್ದರು.ಭಕ್ತಿಯ ಮೂಲಕ ಭಗವಂತನಿಗೆ ಹತ್ತಿರವಾಗಿದ್ದ ಕನಕದಾಸರದ್ದು ಅದಮ್ಯ ಚೇತನ. ಕನಕ ಎಂಬ ಹೆಸರಿನಲ್ಲಿ ಅಗಾಧವಾದ ಶಕ್ತಿ ಇದೆ. ಜಯಂತಿಗಳ ಆಚರಣೆಗೆ ಅರ್ಥ ಬರಬೇಕಾದರೆ ಯಾವುದೆ ದಾರ್ಶನಿಕರು, ಸಂತರ ಜೀವನ, ಅವರ ಕೊಡುಗೆ ಬಗ್ಗೆ ಅಧ್ಯಯನ ನಡೆಸಿ, ಆದರ್ಶಗಳನ್ನು ನಿತ್ಯಜೀನವದಲ್ಲಿ ಅನುಷ್ಠಾನಕ್ಕೆ ತರಬೇಕು. ಕನ್ನಡ ನಮ್ಮ ಬದುಕಿನ ಭಾಷೆ. ಅದಕ್ಕೆ ನಾವು ಮೊದಲ ಆದ್ಯತೆ ನೀಡಬೇಕು. ಕನ್ನಡ ಭಾಷೆಯನ್ನು ನಾವುಗಳು ಹೆಚ್ಚಾಗಿ ಬಳಸಬೇಕು ಹಾಗೂ ಅನ್ಯಭಾಷಿಕರಿಗೆ ಕಲಿಸುವ ಮೂಲಕ ಬದ್ದತೆಯಿಂದ ಕನ್ನಡ ನಾಡು, ನುಡಿಗಾಗಿ ದುಡಿಯಬೇಕು ಎಂದು ಕರೆ ನೀಡಿದರು ಈ ಸಂಧರ್ಬದಲ್ಲಿ ಅಧಿಕಾರಿ ವರ್ಗದವರು, ಸಿಬ್ಬಂಧಿ ವರ್ಗದವರು ಪೌರ ಕಾರ್ಮಿಕರುಭಾಗವಹಿಸಿದ್ದರು.

## ಗಣಪತಿ ದೇವಸ್ಥಾನದಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ



**ಹೊಳಲ್ಕೆರೆ** : ಪಟ್ಟಣದ ಕೋಟೆಯಲ್ಲಿರುವ ಐತಿಹಾಸಿಕ ಹಿನ್ನೆಲೆಯ ವಿನಾಯಕ ಯುವಕರ ಸಂಘದ ವತಿಯಿಂದ 42ನೇ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಗುರುವಾರ ಪಟ್ಟಣದ ಗಣಪತಿ ದೇವಸ್ಥಾನದ ಆವರಣದಲ್ಲಿ ಅದ್ದೂರಿಯಾಗಿ ಆಯೋಜನೆ ಮಾಡಲಾಗಿತ್ತು.ಕನ್ನಡ ರಾಜ್ಯೋತ್ಸವ ಧ್ವಜಾರೋಹಣ ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷರಾದ ಸಿದ್ದರಾಮಯ್ಯ ನೆರವೇರಿಸಿದರು.

---

**ಪ್ರಮುಖ ಸುದ್ದಿ**

# 500 ವರ್ಷಗಳ ಹಿಂದೆ ಸಮಾಜವನ್ನ ಪರಿವರ್ತನೆ ಮಾಡುವ ಕೆಲಸ ಮಾಡಿದ್ದ ಕನಕ ದಾಸರು

» **ಹೊಸದುರ್ಗ**

ದಾಸರಲ್ಲೆ ಅತ್ಯಂತ ಶ್ರೇಷ್ಠವಾದವರು ಭಕ್ತ ಕನಕ ದಾಸರು ಸುಮಾರು 300 ಕೀರ್ತನೆಗಳನ್ನು ರಚಿಸಿ ಅವುಗಳನ್ನು ಜನ ಸಾಮಾನ್ಯರಿಗೆ ಹಾಡು ಆಡುಭಾಷೆಯಲ್ಲಿ ಮನಮುಟ್ಟುವಂತೆ ಹಾಡುತ್ತಾ ಸಮಾಜ ಪರಿವರ್ತನೆ ಮಾಡುವ ಕೆಲಸವನ್ನ ಕನಕದಾಸರು ಮಾಡಿದ್ದಾರೆ 500 ವರ್ಷಗಳ ಹಿಂದೆ ಸಮಾಜವನ್ನ ಪರಿವರ್ತನೆ ಮಾಡಿದ ಕೀರ್ತಿ ಕನಕ ದಾಸರಿಗೆ ಸಲ್ಲುತ್ತಿದೆ ಎಂದು ಶಿಕ್ಷಕ ಟಿ.ಪ್ರಕಾಶ್ ತಿಳಿಸಿದರು.




ಪಟ್ಟಣದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗುರುವಾರ ಆಯೋಜಸಲಾಗಿದ್ದ ಕನಕದಾಸರ ಮತ್ತು ವೀರ ಒನಕೆ ಓಬವ್ವ ಜಯಂತಿ ಕಾರ್ಯಕ್ರಕಮದಲ್ಲಿ ಭಾಗವಹಿಸಿ ಕನಕದಾಸದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

500 ವರ್ಷಗಳ ನಂತರ ದಾಸರಲ್ಲೆ ಶ್ರೇಷ್ಟರಾದ ಕನಕದಾಸರು ದಾಸ ಸಾಹಿತ್ಯದ ಮೂಲಕ ಮನವರಿಕೆ ಮಾಡಿದ್ದ ಅವರು ಸಮಾಜದಲ್ಲಿ ಒಬ್ಬದಂಡ ನಾಯಕನಾಗಿ ಒಂದು ಪ್ರಾಂತ್ಯದ ಒಡೆಯನಾಗಿ ವಿಜಯ ನಗರ ಸಮ್ರಾಜ್ಯದಲ್ಲಿ ನಗರದ ಒಡೆಯಾಗಿ ಆಳ್ವಿಕೆ ಮಾಡುತ್ತಿದ್ದ ವ್ಯಕ್ತಿ ಆದಿ ಕೇಶವನ ಅನುಗ್ರಹದಿಂದ ಸಮಾಜದಲ್ಲಿ ಹಾಗುತ್ತಿರುವ ಏರು ಪೇರುಗಳನ್ನು ಕಂಡು ರಾಜ್ಯವನ್ನ ಆಳುವುದರಿಂದ ಸಮಾಜದಲ್ಲಿ ಯಾವುದೇ ಪರಿವರ್ತನೆ ಹಾಗುವುದಿಲ್ಲಾ ಎಂದು ಅರಿತು ಅವರು ದಾಸರಾಗಿ ಪರಿವರ್ತನೆ ಗೊಂಡು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕಾಯಕಕ್ಕೆ ಮುಂದಾದರು ಎಂದರು

ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಹೆಚ್.ಬಿಲ್ಲಪ್ಪ ಕನಕದಾಸರ ಬದುಕು–ಬರಹ ಹಾಗೂ ಅವರ ಜೀವನ ಚರಿತ್ರೆ ಕುರಿತಂತೆ ಉಪನ್ಯಾಸ ನೀಡಿದರು. ಶ್ರೀಮತಿ ಶಬಿನಾಬೇಗಂ ಅವರು ವೀರ ವನಿಕೆ ಒನಕೆ ಓಬವ್ವನ ಕುರಿತಂತೆ ಉಪನ್ಯಾಸ ನೀಡಿದರು.

ಪರಿಷತ್ತಿನ ಅಧ್ಯಕ್ಷ ಬಿ.ಪಿ.ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು,ಮುಖ್ಯ ಅತಿಥಿಯಾಗಿ ಸಮಾಜ ಸೇವಕ ಅಗ್ರೋ ಹೆಚ್.ಶಿವಣ್ಣ ಭಾಗವಹಿಸಿದ್ದರು. ಗಾಯಕ ಬಸವರಾಜ್, ಶ್ರೀಮತಿಶೋಭ, ಶ್ರೀಮತಿಗೀತ, ಅಂಬರೀಷ್,ಮತ್ತಿತರರು ಕನಕದಾಸರ ಕೀರ್ತನೆಗಳನ್ನ ಹಾಡಿದರು.


Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T